# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮೇ 10, 2021

ಸಂಪುಟ : 47 ಸಂಚಿಕೆ : 357 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


### ರಾಜ್ಯದಲ್ಲಿ 47,930 ಸೋಂಕಿತರು ಪತ್ತೆ

## ನಿತ್ಯಸೋಂಕಿನಲ್ಲಿ ಮೊದಲ ಸ್ಥಾನದತ್ತ !

ಬೆಂಗಳೂರು, ಮೇ 9 - ರಾಜ್ಯದಲ್ಲಿ ಭಾನುವಾರ 47,930 ಸೋಂಕಿತರು ಕಂಡು ಬಂದಿದ್ದು, 490 ಜನ ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 5.64 ಲಕ್ಷಕ್ಕೆ ತಲುಪಿದೆ.

ಇದೇ ದಿನ 31,796 ಜನರು ಕೊರೊನಾದಿಂದ ಗುಣಮುಖರಾಗಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 20,897 ಸೋಂಕಿತರು ಕಂಡು ಬಂದಿದ್ದು, 281 ಜನ ಸಾವನ್ನಪ್ಪಿದ್ದಾರೆ.

ರಾಜ್ಯದಲ್ಲಿ ಪ್ರತಿನಿತ್ಯ ಕಂಡು ಬರುವ ಸೋಂಕಿತರ ಸಂಖ್ಯೆ ಬಹುತೇಕ 50 ಸಾವಿರಕ್ಕೆ ಹತ್ತಿರದಲ್ಲಿದೆ. ಒಂದೆಡೆ ಮಹಾರಾಷ್ಟ್ರದಲ್ಲಿ ಸೋಂಕಿತರ ಸಂಖ್ಯೆ ಕಡಿಮೆಯಾಗುವ ಹಾದಿಯಲ್ಲಿದ್ದರೆ, ರಾಜ್ಯದಲ್ಲಿ ಮಾತ್ರ ಅಂತಹ ಸಂಕೇತ ಕಂಡು ಬರುತ್ತಿಲ್ಲ.

ಭಾನುವಾರ ಮಹಾರಾಷ್ಟ್ರದಲ್ಲಿ 48,401 ಸೋಂಕಿತರು ಕಂಡು ಬಂದಿದ್ದಾರೆ. ಏಪ್ರಿಲ್ ಕೊನೆ ವಾರದಲ್ಲಿ ಮಹಾರಾಷ್ಟ್ರ 67 ಸಾವಿರದವರೆಗೆ ಕೊರೊನಾ ಸೋಂಕಿತರನ್ನು ಕಂಡಿತ್ತು. ನಂತರ ರಾಜ್ಯದಲ್ಲಿ ಸೋಂಕಿನ ತೀವ್ರತೆ ತುಸು ಇಳಿಮುಖವಾಗಿದೆ.

ಮಹಾರಾಷ್ಟ್ರದಲ್ಲಿ ಕಳೆದ ವಾರದಲ್ಲಿ ಸರಾಸರಿ 55 ಸಾವಿರದಷ್ಟು ಸೋಂಕಿತರು ಕಂಡು ಬಂದಿದ್ದಾರೆ.

ಕರ್ನಾಟಕದಲ್ಲಿ ಕಳೆದ ವಾರದಲ್ಲಿ ಸರಾಸರಿ 46 ಸಾವಿರದಷ್ಟು ಸೋಂಕಿತರು ಕಂಡು ಬರುತ್ತಿದ್ದಾರೆ. ಅದರಲ್ಲೂ ಬೆಂಗಳೂರು ರಾಷ್ಟ್ರದಲ್ಲೇ ಅತಿ ಹೆಚ್ಚು ಸಕ್ರಿಯ ಸೋಂಕಿತರನ್ನು ಹೊಂದಿರುವ ನಗರವಾಗಿ ಪರಿವರ್ತನೆಯಾಗಿದೆ. ನಗರದಲ್ಲಿ ಕಳೆದ ವಾರ ಸರಾಸರಿ 21 ಸಾವಿರದಷ್ಟು ಸೋಂಕಿತರು ಪತ್ತೆಯಾಗುತ್ತಿದ್ದಾರೆ. ಪ್ರಸಕ್ತ ಬೆಂಗಳೂರಿನಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 3.50 ಲಕ್ಷದಷ್ಟಾಗಿದೆ.

# ಕೊರೊನಾ ಭಯವಿಲ್ಲದೇ ಜನಜಂಗುಳಿ

## ಮಾರುಕಟ್ಟೆಯಲ್ಲಿ ತರಕಾರಿ, ದಿನಸಿಗೆ ಮುಗಿಬಿದ್ದ ಜನ, ಮುನ್ನೆಚ್ಚರಿಕೆ ಮಾಯ



ದಾವಣಗೆರೆ, ಮೇ 9- ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕೊರೊನಾ ನಿಯಂತ್ರಣಕ್ಕೆ ಸಿಗದಂತಾಗಿದೆ. ಹಾಗಾಗಿ ರಾಜ್ಯ ಸರ್ಕಾರ ಸೋಮವಾರದಿಂದ 14 ದಿನಗಳ ಲಾಕ್‌ಡೌನ್ ಮಾಡಿದ್ದು, ಈ ಹಿನ್ನೆಲೆಯಲ್ಲಿ ನಗರದ ಜನರು ತರಕಾರಿ, ದಿನಸಿ ಖರೀದಿಗೆ ಮಾರುಕಟ್ಟೆಗೆ ಮುಗಿ ಬಿದ್ದಿದ್ದರು.

ನಾಳೆಯಿಂದ ತರಕಾರಿ ಸಿಗುವುದೋ, ಇಲ್ಲವೋ ಎಂಬಂತೆ ಮಾರುಕಟ್ಟೆಯಲ್ಲಿ ಜನಜಂಗುಳಿ ಕಂಡು ಬಂತು. ತರಕಾರಿ ಮಾರುಕಟ್ಟೆಯಲ್ಲಿ ಕೇವಲ ವ್ಯಾಪಾರಸ್ಥರಿಗೆ, ರೈತರಿಗೆ ಹಾಗೂ ತಳ್ಳುಗಾಡಿ ವ್ಯಾಪಾರಸ್ಥರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಸಾರ್ವಜನಿಕರನ್ನು ಸಂಪೂರ್ಣವಾಗಿ ನಿಷೇಧ ಮಾಡಿದ್ದಾರೆ. ಆದರೂ ಕೂಡ ಜನರು ತಂಡೋಪ ತಂಡವಾಗಿ ತರಕಾರಿ ಖರೀದಿಗೆ ಸಾಮಾಜಿಕ ಅಂತರ ಹಾಗೂ ಮಾಸ್ಕ್ ಸರಿಯಾಗಿ ಹಾಕಿಕೊಳ್ಳದೆ ವ್ಯಾಪಾರ, ವಹಿವಾಟು ನಡೆಸಿದರು.

ಕೋವಿಡ್ ಸೋಂಕಿತರ ಸಂಖ್ಯೆ, ಸಾವು-ನೋವು ಹೆಚ್ಚಾಗುತ್ತಿದ್ದರೂ ಎಚ್ಚೆತ್ತುಕೊಳ್ಳದ ಜನರು ಮಾತ್ರ ಯಾವುದೇ ಭಯವಿಲ್ಲದೇ ವ್ಯಾಪಾರ, ವಹಿವಾಟು ನಡೆಸಿದ್ದು ಕೆ.ಆರ್. ಮಾರುಕಟ್ಟೆಯಲ್ಲಿ ಕಂಡು ಬಂತು. ಸೋಮವಾರದಿಂದ ಟಫ್ ಲಾಕ್ ಡೌನ್ ಅನ್ನು ರಾಜ್ಯ ಸರ್ಕಾರ ವಿಧಿಸಿದ್ದು, ಈ ಹಿನ್ನೆಲೆಯಲ್ಲಿ ಜನಸಂದಣಿ ಹೆಚ್ಚಾಗಿತ್ತು. ಅದು ಎಷ್ಟರ ಮಟ್ಟಿಗೆ ಎಂದರೆ ಕಾಲಿಡಲು ಸಹ ಜಾಗವಿರಲಿಲ್ಲ. ಗಡಿಯಾರ ಕಂಬ, ಚಾಮರಾಜ ಪೇಟೆ, ಚೌಕಿಪೇಟೆಗಳಲ್ಲೂ ಇದೇ ಸ್ಥಿತಿ ಇತ್ತು.

ಮನೆ ಬಾಗಿಲಿಗೆ ಹೋಗಿ ತಳ್ಳುಗಾಡಿ ಮುಖಾಂತರ ತರಕಾರಿ ವ್ಯಾಪಾರ ಮಾಡಬೇಕು ಎನ್ನುವ ಆದೇಶವಿದ್ದರೂ ಜನರು ಮಾರುಕಟ್ಟೆಯತ್ತ ಧಾವಿಸಿದರು. ಹತ್ತು ಗಂಟೆಯಾದರೂ ಜನರು ವ್ಯಾಪಾರ ವಹಿವಾಟು ನಡೆಸಿದರು.

ಹಣ್ಣು, ತರಕಾರಿ, ಸೊಪ್ಪು, ದಿನಸಿ ಖರೀದಿಗೆ ಜನರು ಮುಂದಾಗಿದ್ದರಿಂದ ಒಮ್ಮುಖ ರಸ್ತೆ, ನೋ ಪಾರ್ಕಿಂಗ್ ಸ್ಥಳ ಯಾವುದನ್ನೂ ಗಮನಿಸದೆ ವಾಹನಗಳನ್ನು ಮಾರುಕಟ್ಟೆ ಬಳಿ ಸಾಲು ಸಾಲಾಗಿ ನಿಲ್ಲಿಸಿದ ಪರಿಣಾಮ ಒಂದು ಗಂಟೆಗೂ ಹೆಚ್ಚು ಕಾಲ ಟ್ರಾಫಿಕ್ ಜಾಮ್ ಆಗಿತ್ತು. ವಾಹನ ಸಂಚಾರ ದಟ್ಟಣೆಯಿಂದ ಕೆ.ಆರ್. ಮಾರ್ಕೆಟ್ ಫುಲ್ ರಶ್ ಆಗಿತ್ತು.

ಜನಜಂಗುಳಿಯನ್ನು ಕಡಿಮೆ ಮಾಡಲು ಪೊಲೀಸರು ಪ್ರಯತ್ನ ಪಟ್ಟರೂ ಅದಕ್ಕೆ ಜನ ಬಗ್ಗಲಿಲ್ಲ. ಇದರಿಂದ ಅಲ್ಲಲ್ಲಿ ಪೊಲೀಸರು ಜನರಿಗೆ ಲಾಠಿ ರುಚಿ ತೋರಿಸಿದರು. ಇನ್ನು ಅಗತ್ಯ ವಸ್ತುಗಳನ್ನು ಹೊರತುಪಡಿಸಿ, ಇತರೆ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ಪೊಲೀಸರು, ಪಾಲಿಕೆ ಅಧಿಕಾರಿಗಳು ದಾಳಿ ಮಾಡಿ ದಂಡ ವಿಧಿಸಿದರು.

### ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ: ಎಸ್ಪಿ ಎಚ್ಚರಿಕೆ



ಸೋಮವಾರದಿಂದ ಲಾಕ್‌ಡೌನ್ ಹಿನ್ನೆಲೆಯಲ್ಲಿ ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಸ್ಪಿ ಹನುಮಂತರಾಯ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಅನಗತ್ಯ ಓಡಾಟಕ್ಕೆ ಸಂಪೂರ್ಣ ನಿಷೇಧವಿದೆ. ಸುಖಾಸುಮ್ಮನೆ ಹೊರ ಬಂದರೆ ಕೇಸ್ ದಾಖಲಿಸಲಾಗುವುದು ಎಂದು ಮುನ್ನೆಚ್ಚರಿಸಿದ್ದಾರಲ್ಲದೇ, ಲಾಕ್ ಡೌನ್ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲಿಸಿ, ಮನೆಯಲ್ಲೇ ಇದ್ದು ಸುರಕ್ಷಿತವಾಗಿರಿ ಎಂದು ಮನವಿ ಸಹ ಮಾಡಿದ್ದಾರೆ.

**ಹಠಮಾರಿತನಕ್ಕೆ ಬೇಸರ:** ಮಾಸ್ಕ್, ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ವ್ಯಾಪಾರಸ್ಥರು ಕೇಳಿಕೊಂಡರೂ ಅದಕ್ಕೆ ಮನ್ನಣೆ ನೀಡದೇ ಜನರು ಹಠಮಾರಿತನ ಪ್ರದರ್ಶನ ಮಾಡುವುದಾಗಿ ಅಂಗಡಿಯವರು ಬೇಸರಿಸಿದರು.

ಸಮಯ ಮುಗಿದರೂ ಮಾರುಕಟ್ಟೆ ನೆಪದಲ್ಲಿ ಜನರು ಬೈಕ್, ಕಾರಿನಲ್ಲಿ ಅಡ್ಡಾಡುತ್ತಿದ್ದರು. ಮುಖ್ಯ ರಸ್ತೆಗಳಲ್ಲಿ ಪೊಲೀಸರು ಅವರನ್ನು ತಡೆಗಟ್ಟಿ ವಿಚಾರಣೆ ಮಾಡಿ, ದಂಡವನ್ನು ಹಾಕುತ್ತಿದ್ದ ದೃಶ್ಯ ಕಂಡು ಬಂದಿತು.

## ಕೊರೊನಾ ನಿಯಂತ್ರಣಕ್ಕೆ ಹೊಸ ಮಾರ್ಗಸೂಚಿ : ನಿಷೇಧಾಜ್ಞೆ ಜಾರಿ



ದಾವಣಗೆರೆ, ಮೇ 9- ಕೊರೊನಾ ಎರಡನೇ ಅಲೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ನಾಳೆ ದಿನಾಂಕ 10 ರಿಂದ ಅನ್ವಯವಾಗುವಂತೆ ಹೊರಡಿಸಿರುವ ಹೊಸ ಮಾರ್ಗಸೂಚಿಗಳ ಕಟ್ಟುನಿಟ್ಟಿನ ಜಾರಿ ಹಿನ್ನೆಲೆಯಲ್ಲಿ ನಾಳೆ ದಿನಾಂಕ 10 ರ ಬೆಳಿಗ್ಗೆ 6 ರಿಂದ ಇದೇ ದಿನಾಂಕ 24 ರ ಬೆಳಿಗ್ಗೆ 6 ಗಂಟೆವರೆಗೆ ಸಿಆರ್‌ಪಿಸಿ ಸೆಕ್ಷನ್ 144 ರನ್ವಯ ಜಿಲ್ಲೆಯಾದ್ಯಂತ ನಾಲ್ಕಕ್ಕಿಂತ ಹೆಚ್ಚು ಜನರು ಗುಂಪು ಸೇರುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ರೈಲ್ವೇ ನಿಲ್ದಾಣ ಮತ್ತು ಕೋವಿಡ್ ಶಿಷ್ಟಾಚಾರ ಪಾಲನೆ ಹೊರತುಪಡಿಸಿ ಉಳಿದೆಲ್ಲೆಡೆ ಈ ನಿಷೇಧಾಜ್ಞೆ **(2ನೇ ಪುಟಕ್ಕೆ)**

### ಮಾರ್ಗಸೂಚಿಗಳ ಕಟ್ಟುನಿಟ್ಟಿನ ಜಾರಿಗೆ ಆದೇಶ

ದಾವಣಗೆರೆ, ಮೇ 9- ಕೋವಿಡ್ 19 ಸೋಂಕು ಹರಡುವ ಸರಪಳಿಯನ್ನು ತಡೆಗಟ್ಟಲು ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರ ನಾಳೆ ದಿನಾಂಕ 10 ರಿಂದ 24 ರವರೆಗೆ ಪರಿಷ್ಕೃತ ಮಾರ್ಗಸೂಚಿಗಳ ಆದೇಶವನ್ನು ಹೊರಡಿಸಿದ್ದು, ವಿಪತ್ತು ನಿರ್ವಹಣಾ ಕಾಯ್ದೆಯಲ್ಲಿ ಪ್ರದತ್ತವಾದ **(2ನೇ ಪುಟಕ್ಕೆ)**

## ಆಫ್ಘಾನ್ ಶಾಲೆಯಲ್ಲಿ ಸ್ಫೋಟ : 50 ಸಾವು

ಕಾಬುಲ್ ಮೇ 9 – ಆಫ್ಘಾನಿಸ್ತಾನದ ರಾಜಧಾನಿಯಲ್ಲಿನ ಬಾಲಕಿಯರ ಶಾಲೆಯಲ್ಲಿ ಸಂಭವಿಸಿದ ಭಾರೀ ಸ್ಫೋಟದಲ್ಲಿ ಕನಿಷ್ಠ 50 ಜನ ಸಾವನ್ನಪ್ಪಿದ್ದಾರೆ. ಇವರಲ್ಲಿ ಹಲವರು 11ರಿಂದ 15 ವರ್ಷಗಳ ಮಕ್ಕಳಾಗಿದ್ದಾರೆ.

ಶನಿವಾರ ನಡೆಸಲಾದ ಬಾಂಬ್ ದಾಳಿಯಲ್ಲಿ 100ಕ್ಕ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಗೃಹ ಸಚಿವಾಲಯದ ವಕ್ತಾರ ತಾರಿಕ್ ಅರಿಯನ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಶಾಲೆ ಮುಗಿಸಿಕೊಂಡು ಹೊರ ಬರುವಾಗ ಪ್ರವೇಶ ದ್ವಾರದ ಬಳಿ ಮೂರು ಸ್ಫೋಟಕಗಳನ್ನು ಸಿಡಿಸಲಾಗಿದೆ.

## ಜಿಲ್ಲೆಯಲ್ಲಿ 453 ಸೋಂಕಿತರು ಪತ್ತೆ

ದಾವಣಗೆರೆ, ಮೇ 9 - ಜಿಲ್ಲೆ ಯಲ್ಲಿ ಭಾನುವಾರ 453 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ ಹಾಗೂ ಐವರು ಸಾವನ್ನಪ್ಪಿದ್ದಾರೆ.

ಇದೇ ದಿನ 393 ಜನ ಕೊರೊನಾದಿಂದ ಚೇತರಿಸಿಕೊಂಡು ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 3,213ಕ್ಕೆ ತಲುಪಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 266, ಹರಿಹರದಲ್ಲಿ 31, ಜಗಳೂರಿನಲ್ಲಿ 26, ಚನ್ನಗಿರಿಯಲ್ಲಿ 46, ಹೊನ್ನಾಳಿಯಲ್ಲಿ 64 ಹಾಗೂ ಹೊರ ಜಿಲ್ಲೆಗಳ 20 ಸೋಂಕಿತರು ಕಂಡು ಬಂದಿದ್ದಾರೆ. ದಾವಣಗೆರೆ ತಾಲ್ಲೂಕಿನ ನಾಲ್ವರು ಹಾಗೂ ಹರಿಹರದ ಒಬ್ಬರು ಕೊರೊನಾದಿಂದ ಸಾವನ್ನಪ್ಪಿದ್ದಾರೆ.

## ಕೋವ್ಯಾಕ್ಸಿನ್ ಲಸಿಕೆ ಕೊರತೆ : ನಾಗರಿಕರಲ್ಲಿ ಆತಂಕ



ಲಸಿಕಾ ಕೇಂದ್ರಗಳ ಬಳಿ ಲಸಿಕೆ ಪಡೆಯಲು ಸರತಿ ಸಾಲಿನಲ್ಲಿ ನಿಂತಿರುವುದು.

ದಾವಣಗೆರೆ, ಮೇ 9- ಕೊರೊನಾ ಮಹಾಮಾರಿ ದಿನೇ ದಿನೇ ಹೆಚ್ಚಾಗುತ್ತಾ ಜನರನ್ನು ಕಾಡುವ ಜೊತೆಗೆ ಜೀವವನ್ನೇ ಬಲಿ ಪಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಜೀವ ಉಳಿದರೆ ಸಾಕು ಎಂದು ಜನ ಲಸಿಕೆ ಪಡೆಯಲು ಮುಗಿ ಬೀಳುತ್ತಿದ್ದಾರೆ. ಆದರೆ ಲಸಿಕೆ ಕೊರತೆ ಜನರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಜನರು ಜಿಲ್ಲಾಸ್ಪತ್ರೆ ಸೇರಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಲಸಿಕಾ ಕೇಂದ್ರಗಳ ಬಳಿ ಲಸಿಕೆ ಪಡೆಯಲು ಸರತಿ ಸಾಲಿನಲ್ಲಿ ನಿಂತು ಹರಸಾಹಸಪಡುತ್ತಿದ್ದಾರೆ. ಈ ಹಿಂದೆ ಕೊರೊನಾ ಸೋಂಕು ಎರಡನೇ ಅಲೆಯ ವೇಳೆ ಲಸಿಕೆಯತ್ತ ಮುಖ ಮಾಡದ ಜನರು, ಇದೀಗ ಹೆಚ್ಚು ಸೋಂಕು ಹರಡುವಿಕೆ, ಬಲಿ ಪಡೆಯುವ ಆರ್ಭಟಕ್ಕೆ ಭಯಭೀತರಾಗಿ ಎರಡೂ ಹಂತದ ಲಸಿಕೆ ಪಡೆಯಲು ಮನಸ್ಸು ಮಾಡಿದ್ದಾರೆ.

ಆದರೆ ಎಲ್ಲರಿಗೂ ಲಸಿಕೆ ನೀಡಲು ಲಸಿಕೆ ಕೊರತೆ ಕಾಡುತ್ತಿರುವ ಹಿನ್ನೆಲೆಯಲ್ಲಿ ಸದ್ಯಕ್ಕೆ ಮೊದಲ ಲಸಿಕೆ ಪಡೆದವರಿಗೆ 2ನೇ ಹಂತದ ಲಸಿಕೆ ನೀಡಲಾಗುತ್ತಿದ್ದು, ಕೇವಲ ಕೋವಿಶೀಲ್ಡ್ ಲಸಿಕೆ ಹಾಕಲಾಗುತ್ತಿದೆ. ಮೊದಲ ಲಸಿಕೆಯನ್ನೇ ಪಡೆಯದವರು ಹಾಗೂ ಕೊವ್ಯಾಕ್ಸಿನ್ ಮೊದಲ ಲಸಿಕೆ ಪಡೆದವರು 2ನೇ ಲಸಿಕೆಗಾಗಿ ಎದುರು ನೋಡುತ್ತಿದ್ದಾರೆ. ಕೊವ್ಯಾಕ್ಸಿನ್ ಮೊದಲ ಲಸಿಕೆ ಪಡೆದವರು 2ನೇ ಲಸಿಕೆಯಾಗಿ ಕೊವ್ಯಾಕ್ಸಿನ್ ಪಡೆಯಬೇಕಿದೆಯೇ ಹೊರತು ಕೋವಿಶೀಲ್ಡ್ ಹಾಕಿಸಿಕೊಳ್ಳಲು ಬರುವುದಿಲ್ಲ.

**200 ಕೋವ್ಯಾಕ್ಸಿನ್ ಲಸಿಕೆ:** 28 ದಿನಗಳ ನಂತರ ಹಾಗೂ ಮೊದಲ ಲಸಿಕೆ ಪಡೆದು ನಿಗದಿತ ದಿನಗಳಿಗಿಂತ ಮುನ್ನವೇ ಜನ ಲಸಿಕೆಗೆ ಮುಂದಾಗುತ್ತಿದ್ದಾರೆ. ಆದರೆ ಮೊದಲ ಲಸಿಕೆ ಪಡೆದು 45 ದಿನಗಳಾದವರಿಗೆ 2ನೇ ಹಂತದ ಲಸಿಕೆ ಹಾಕಲು ಆದೇಶಿಸಲಾಗಿದೆ. ಸದ್ಯಕ್ಕೆ ಸೋಮವಾರ 2ನೇ ಹಂತದ ಲಸಿಕೆ ಪಡೆಯಬೇಕಾದವರಿಗೆ **(2ನೇ ಪುಟಕ್ಕೆ)**

## ಜಗಳೂರಿನಲ್ಲಿ ಬಿರುಗಾಳಿ ಮಳೆ ಲಕ್ಷಾಂತರ ರೂ.ಗಳಷ್ಟು ಹಾನಿ



ಜಗಳೂರು, ಮೇ 9- ತಾಲ್ಲೂಕಿನ ಸೊಕ್ಕೆ, ಯರ್ಲಕಟ್ಟೆ, ಲಕ್ಕಂಪುರ, ಗೋಪಲಾಪುರ, ಮಡ್ರಹಳ್ಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಶುಕ್ರವಾರ ಸಂಜೆ ಸುರಿದ ಬಿರುಗಾಳಿ ಸಹಿತ ಮಳೆಗೆ ಅಡಿಕೆ, ಎಲೆಬಳ್ಳಿ ತೋಟ, ಮನೆಯ ತಗಡು, ಅನೇಕ ವಿದ್ಯುತ್ ಕಂಬಗಳು, ವಿದ್ಯುತ್ ಟಿ.ಸಿ ಬಿದ್ದು, ಲಕ್ಷಾಂತರ ರೂ. ನಷ್ಟ ಆಗಿರುವ ಘಟನೆ ವರದಿಯಾಗಿದೆ.

ಯರ್ಲಕಟ್ಟೆ ಗ್ರಾಮದಲ್ಲಿ ಎರಡು ದಿನಗಳಿಂದ ವಿದ್ಯುತ್ ಕಂಬಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಬೆಸ್ಕಾಂ ಇಲಾಖೆ ಕಾರ್ಯಪ್ರವೃತ್ತವಾಗಿದೆ. ಯರ್ಲಕಟ್ಟೆ ಗ್ರಾಮದ ಬೋರ್‌ವೆಲ್ ಮಂಜಣ್ಣನವರ 40 ಅಧಿಕ ಫಸಲಿಗೆ **(2ನೇ ಪುಟಕ್ಕೆ)**

## ರೂಪಾಂತರಿಯಾದರೂ ಮೂರನೇ ಅಲೆ ತೀವ್ರತೆ ಇಳಿಸಬಹುದು : ಪರಿಣಿತರ ಸಲಹೆ

ನವದೆಹಲಿ, ಮೇ 9 – ಕೊರೊನಾ ರೂಪಾಂತರಿ ಯಾವುದೇ ಆಗಿದ್ದರೂ ಲಸಿಕೆ ಹಾಗೂ ಸೂಕ್ತ ವರ್ತನೆಯಿಂದ ಮೂರನೇ ಅಲೆ ತೀವ್ರತೆ ಕಡಿಮೆ ಮಾಡಬಹುದು ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ದೇಶದಲ್ಲೀಗ ಕೊರೊನಾದ 2ನೇ ಅಲೆ ಕಂಡು ಬರುತ್ತಿದೆ. ಕಳೆದ ವಾರದಲ್ಲಿ ಕೊರೊನಾ ಸೋಂಕುಗಳ ಪ್ರಮಾಣ ಪ್ರತಿದಿನ 4 ಲಕ್ಷಗಳ ಹಂತದಲ್ಲಿದೆ. ಪ್ರತಿ ದಿನ ಸೋಂಕಿನಿಂದ ನಾಲ್ಕು ಸಾವಿರದಷ್ಟು ಸಾವುಗಳು ಸಂಭವಿಸುತ್ತಿವೆ.

ಮೂರನೇ ಅಲೆ ಬರುವುದು ನಿಶ್ಚಿತ. ಇನ್ನೂ ಕೆಲ ಅಲೆಗಳಿಗೆ ಸಿದ್ಧವಾಗಿರಬೇಕಿದೆ. ಆದರೆ, ಸೂಕ್ತ ವರ್ತನೆಯಿಂದ ಅಲೆಯನ್ನು ನಿಯಂತ್ರಿಸ ಬಹುದು ಎಂದು ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ. ವಿಜಯ ರಾಘವನ್ ಹೇಳಿದ್ದಾರೆ.

ನಾವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. **(2ನೇ ಪುಟಕ್ಕೆ)**

## ಲಾಕ್‌ಡೌನ್ ವಿರುದ್ಧ ಗ್ರಾಮೀಣರ ದಂಗೆ




### ಕೊರೊನಾಕ್ಕಿಂತ ಸರ್ಕಾರದಿಂದ ಜನತೆಗೆ ಬವಣೆ

ಬೆಂಗಳೂರು, ಮೇ 9 – ಕೊರೊನಾ ರೋಗಕ್ಕಿಂತ ಹೆಚ್ಚಾಗಿ ಇಲ್ಲಿನ ರೋಗಗ್ರಸ್ಥ ಬಿಜೆಪಿ ಸರ್ಕಾರದಿಂದ ರಾಜ್ಯದ ಜನತೆ ಬವಣೆ ಪಡುವಂತಾಗಿದೆ ಎಂದಿರುವ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಸೋಮವಾರದಿಂದ ಜಾರಿಗೆ ಬರಲಿರುವ ಲಾಕ್‌ಡೌನ್ ಗೊಂದಲದ ಗೂಡಾಗಿದ್ದು ಗ್ರಾಮೀಣ ಪ್ರದೇಶದ ಜನತೆ ಇದರ ವಿರುದ್ಧ ದಂಗೆ ಎದ್ದರೂ ಆಶ್ಚರ್ಯ ಇಲ್ಲ ಎಂದಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಪರಿಷ್ಕೃತ ಲಾಕ್‌ಡೌನ್ ಅನ್ವಯ ಬೆಳಿಗ್ಗೆ ಆರರಿಂದ ಹತ್ತರವರೆಗೆ ದಿನಸಿ, ತರಕಾರಿ, ಮೀನು-ಮಾಂಸದ ಅಂಗಡಿಗಳು ತೆರೆಯಲು ಅವಕಾಶ ನೀಡಿ, ಈ ಅವಧಿಯಲ್ಲಿ ವಾಹನ ಸಂಚಾರ ಮಾತ್ರ ನಿಷೇಧಿಸಿರುವುದು ಸರ್ಕಾರದ ಮೂರ್ಖತನದ ನಿರ್ಧಾರ ಎಂದಿದ್ದಾರೆ.

ಲಾಕ್‌ಡೌನ್ ಜನವಿರೋಧಿ ಎಂದಿರುವ ಸಿದ್ದರಾಮಯ್ಯ, ಗ್ರಾಮೀಣ ಪ್ರದೇಶಗಳಲ್ಲಿ ಅಂಗಡಿ-ಮುಂಗಟ್ಟುಗಳು 2-3 ಕಿ.ಮೀ.ದೂರದಲ್ಲಿವೆ. ಅಲ್ಲಿಂದ ಮನೆ ಸಾಮಾನುಗಳನ್ನು ಹಿರಿಯರು, ಅಶಕ್ತರು **(2ನೇ ಪುಟಕ್ಕೆ)**

## ಹಣಕ್ಕೆ ಕೊರತೆ ಇಲ್ಲ, ಕೋವಿಡ್ ಹಿಮ್ಮೆಟ್ಟಿಸಲು ಸಹಕರಿಸಲು ಮನವಿ



ಹರಪನಹಳ್ಳಿ, ಮೇ 9- ನಾವು ರಾಜ್ಯ ಸರ್ಕಾರದ ಹಣ ಕಾಯಬೇಕಿಲ್ಲ, ಜಿಲ್ಲಾ ಖನಿಜ ಅನುದಾನ ಇದೆ, ಹಣಕ್ಕೇನು ಕೊರತೆ ಇಲ್ಲ. ಔಷಧ, ಸಲಕರಣೆಗಳ ಸಮರ್ಪಕ ವ್ಯವಸ್ಥೆ ಮಾಡಲಾಗುವುದು, ಕೋವಿಡ್ ಹಿಮ್ಮೆಟ್ಟಿಸಲು ಸಹಕಾರ ಕೊಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆನಂದ್‌ಸಿಂಗ್ ಮನವಿ ಮಾಡಿದ್ದಾರೆ.

ಅವರು ಪಟ್ಟಣದ ಮಿನಿ ವಿಧಾನ ಸೌಧದ ಆವರಣದಲ್ಲಿ ಭಾನುವಾರ ಕೋವಿಡ್ ನಿಯಂತ್ರಣ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ಪ್ರತಿ ತಾಲ್ಲೂಕಿನಲ್ಲೂ 100 ಕೋವಿಡ್ ಬೆಡ್, 10 ವೆಂಟಿಲೇಟರ್‌ಗಳ ವ್ಯವಸ್ಥೆ ಮಾಡಲಾಗುವುದು ಜಿಂದಾಲ್‌ಗೆ ಆಕ್ಸಿಜನ್ ಉತ್ಪಾದನೆ ಹೆಚ್ಚಳಕ್ಕೆ ಸೂಚಿಸಲಾಗಿದೆ ಎಂದರು.

ಕೋವಿಡ್ ಮೊದಲನೇ ಅಲೆ ಬಂದಾಗ ಮುನ್ನಚ್ಚರಿಕೆ ಕ್ರಮ ಕೈಗೊಂಡಿದ್ದರೆ, ಎರಡನೇ ಅಲೆ ಬರುತ್ತಿರಲಿಲ್ಲ, ಎಲ್ಲೋ ಒಂದು ಕಡೆ ಎಡವಿದೆವು, ಈಗ ಬಂದಿರುವ ಕೋವಿಡನ್ನು ತಡೆಗಟ್ಟಲು, ಮುಂದೆ ಮೂರನೇ ಅಲೆ ಬರುತ್ತದೆ ಎಂದು ಹೇಳುತ್ತಾರೆ. ಆ ರೀತಿ ಬಂದರೂ ಎದುರಿಸಲು ವ್ಯವಸ್ಥಿತವಾಗಿ ಸಿದ್ದತೆ ಮಾಡಿಕೊಳ್ಳಲಾಗುವುದು ಎಂದರು. ವೈದ್ಯರು ಸೇರಿದಂತೆ ಕೊರೊನಾ ವಾರಿಯರ್ಸ್ ಸೇವಾ ಮನೋಭಾವನೆಯಿಂದ ಕೆಲಸ ಮಾಡಬೇಕು, ನಿರ್ಲಕ್ಷ್ಯ ಮಾಡಬೇಡಿ, ಏನಾದರೂ ಕೊರತೆ ಇದ್ದರೆ ತಿಳಿಸಿ ಎಂದು ಅವರು ಹೇಳಿದರು.

### ಹರಪನಹಳ್ಳಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್

ಜಿಲ್ಲಾಧಿಕಾರಿ ಪವನ್ ಕುಮಾರ್ ಮಲಪಾಟಿ ಮಾತನಾಡಿ, ಹರಪನಹಳ್ಳಿ ಸಾರ್ವಜನಿಕ ಆಸ್ಪತ್ರೆಯನ್ನು ಸಂಪೂರ್ಣ ಕೋವಿಡ್ ಆಸ್ಪತ್ರೆಯನ್ನಾಗಿ ಶೀಘ್ರ ಮಾರ್ಪಾಡಿಸಲಾಗುವುದು, ಇತರೆ ರೋಗಿಗಳನ್ನು ಫೀವರ್ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಕೊಡುವ ವ್ಯವಸ್ಥೆ ಮಾಡಲಾಗುವುದು ಎಂದರು.

ಹೋಂ ಐಸೋಲೇಷನ್‌ನಲ್ಲಿ ಇರುವವರ ಬಗ್ಗೆ ಪ್ರತಿದಿನ ಆಶಾ ಕಾರ್ಯಕರ್ತರು 2 ಬಾರಿ ಭೇಟಿ ನೀಡಿ, ಆರೋಗ್ಯ ವಿಚಾರಿಸಬೇಕು ಎಂದು ಸೂಚಿಸಿದರು.

ಸ್ಥಳೀಯ ಶಾಸಕ ಜಿ.ಕರುಣಾಕರ ರೆಡ್ಡಿ ಅವರು, ಹರಪನಹಳ್ಳಿ ತಾಲ್ಲೂಕಿಗೆ ಅಗತ್ಯ ಔಷಧ, ಸಲಕರಣೆಗಳನ್ನು ಒದಗಿಸಿ ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ ಎಂದು ಜಿಲ್ಲಾಧಿಕಾರಿಯವರನ್ನು ಕೋರಿದರು.

ಬಳ್ಳಾರಿ ಸಂಸದ ವೈ.ದೇವೇಂದ್ರ, ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ, ಪೊಲೀಸ್ ವರಿಷ್ಠಾಧಿಕಾರಿ ಸೈದುಲ್ಲಾ ಅಡಾವತ್‌ರವರು ಕೋವಿಡ್ ನಿಯಂತ್ರಣ ಕುರಿತು ಅನೇಕ ಸಲಹೆಗಳನ್ನು ನೀಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಜನಾರ್ದನ, ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ, ತಹಶೀಲ್ದಾರ್ ಎಲ್.ಎಂ.ನಂದೀಶ್, ಡಿವೈಎಸ್ಪಿ ಹಾಲಮೂರ್ತಿ ರಾವ್ , ಟಿಹೆಚ್‌ಓ ಪಿ.ಕೆ.ವೆಂಕಟೇಶ್, ಡಾ.ಶಿವಕುಮಾರ್, ಬಿಇಒ ವೀರಭದ್ರಯ್ಯ, ಜಿ.ಪಂ ಸದಸ್ಯರುಗಳಾದ ಸುವರ್ಣ ಆರುಂಡಿ ನಾಗರಾಜ್, ಹೆಚ್.ಬಿ.ಪರಶುರಾಮಪ್ಪ, ಡಾ.ಮಂಜುನಾಥ್ ಉತ್ತಂಗಿ, ತಾ.ಪಂ ಅಧ್ಯಕ್ಷೆ ಅನ್ನಪೂರ್ಣಮ್ಮ, ಸದಸ್ಯೆ ಪ್ರೇಮ ಹಾಗೂ ಇತರರು ಪಾಲ್ಗೊಂಡಿದ್ದರು.


### ಪುಂಡಲೀಕರಾವ್ ಬೊಂಗಾಳೆ ನಿಧನ



ಹರಿಹರದ ನಡುವಲ ಪೇಟೆ ವಾಸಿ, ಪ್ರಥಮ ದರ್ಜೆ ಎಲೆಕ್ಟ್ರಿಕಲ್ ಗುತ್ತಿಗೆದಾರರಾದ **ಶ್ರೀ ಪುಂಡಲೀಕರಾವ್ ಬೊಂಗಾಳೆ** ಅವರು ದಿನಾಂಕ 9.5.2021ರ ಭಾನುವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆ, ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.5.2021ರ ಭಾನುವಾರ ರಾತ್ರಿ 9 ಗಂಟೆಗೆ ಹರಿಹರದಲ್ಲಿ ನೆರವೇರಿತು.

ದುಃಖತಪ್ತ ಕುಟುಂಬ ವರ್ಗ, ಮೊ. : 70260 70566

# ನ್ಯಾಮತಿ : ರಾಮೇಶ್ವರಕ್ಕೆ ಶಾಸಕ ರೇಣುಕಾಚಾರ್ಯ ಮತ್ತೆ ಭೇಟಿ



ನ್ಯಾಮತಿ, ಮೇ 9- ಬೈದರೂ ಪರವಾಗಿಲ್ಲ ಮೊದಲು ಗ್ರಾಮಸ್ಥರೆಲ್ಲರೂ ಕೊರೊನಾ ಪರೀಕ್ಷೆ ಮಾಡಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಿ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ರಾಮೇಶ್ವರ ಗ್ರಾಮಸ್ಥರಲ್ಲಿ ಮತ್ತೊಮ್ಮೆ ಮನವಿ ಮಾಡಿದರು.

ನಾಲ್ಕನೇ ದಿನವಾದ ಭಾನುವಾರ ಸಹ ಗ್ರಾಮಕ್ಕೆ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದು, ಗ್ರಾಮಸ್ಥರಲ್ಲಿ ಮನವಿ ಮಾಡಿ, ನಿಮ್ಮ ಆರೋಗ್ಯವನ್ನು ಕಾಪಾಡುವುದು ಜನಪ್ರತಿನಿಧಿಯಾದ ನನ್ನ ಜವಾಬ್ದಾರಿ ಎಂದ ಅವರು, ಮೊದಲು ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಲು ಮುಂದಾಗಿ ಎಂದರು.

ಗ್ರಾಮದಲ್ಲಿ 1591 ಜನಸಂಖ್ಯೆ ಇದ್ದು, ಅವರಲ್ಲಿ 384 ಜನರನ್ನು ಪರೀಕ್ಷೆಗೆ ಒಳಪಡಿಸಿದ್ದು, ಅದರಲ್ಲಿ 48 ಜನರಿಗೆ ಪಾಸಿಟಿವ್ ಪತ್ತೆಯಾಗಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ. ಗ್ರಾಮಸ್ಥರು ಭಯ ಪಡುವ ಅಗತ್ಯ ಇಲ್ಲ ಎಂದು ಗ್ರಾಮಸ್ಥರಿಗೆ ಆತ್ಮಸ್ಥೈರ್ಯ ತುಂಬಿದರು.

ಕೊರೊನಾ ಬಂದರೆ ಅದನ್ನು ಅವಮಾನ ಎಂದು ಯಾರೂ ಕೂಡ ಭಾವಿಸಬೇಡಿ, ಆತ್ಮಸ್ಥೈರ್ಯದಿಂದ ಅನೇಕರು ಕೊರೊನಾವನ್ನು ಜಯಿಸಿ ಬಂದಿರುವ ನಿದರ್ಶನವಿದೆ ಎಂದರು.

**ಅಧಿಕಾರಿಗಳಿಗೆ ಕಿವಿಮಾತು :** ನೋಡ್ರಿ ಗ್ರಾಮಸ್ಥರು ನನಗೆ, ನಿಮಗೆ ಬೈಯ್ಯಲಿ ಯಾರೂ ಬೇಜಾರು ಮಾಡಿಕೊಳ್ಳುವುದು ಬೇಡ. ಗ್ರಾಮಸ್ಥರನ್ನು ಮನವೊಲಿಸಿ ಎಲ್ಲರಿಗೂ ಕೊರೊನಾ ಟೆಸ್ಟ್ ಮಾಡಿಸಿ ಹಾಗೂ ಯಾರಿಗೆ ಪಾಸಿಟಿವ್ ಬರುತ್ತೋ ಅಂತಹವರನ್ನು ಕೂಡಲೇ ಸರ್ಕಾರಿ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡಿ ಎಂದು ತಹಶೀಲ್ದಾರ್ ತನುಜಾ ಸವದತ್ತಿ, ಉಪ ತಹಸೀಲ್ದಾರ್ ನ್ಯಾಮತಿ ನಾಗರಾಜ್ ಅವರಿಗೆ ಸೂಚಿಸಿದರು.

**ಕಂಟೈನ್ಮೆಂಟ್ ಝೋನ್ :** 1200 ಜನರಿಗೆ ಕೊರೊನಾ ಪರೀಕ್ಷೆ ಮಾಡಿಸಬೇಕಾಗಿರುವುದರಿಂದ ಗ್ರಾಮವನ್ನು ಕಂಟೈನ್ಮೆಂಟ್ ಜೋನ್ ಎಂದು ಘೋಷಿಸಿ, ತಾಲ್ಲೂಕು ಆಡಳಿತ ಹಾಗೂ ಆರೋಗ್ಯ ಇಲಾಖೆ ಇಲ್ಲೇ ಬೀಡು ಬಿಟ್ಟಿದೆ ಎಂದರು.

ಗ್ರಾಮದಲ್ಲಿ ಸಂಪೂರ್ಣ ಕಂಟೈನ್ಮೆಂಟ್ ಜೋನ್ ಎಂದು ಘೋಷಣೆ ಮಾಡಿರುವುದರಿಂದ ಗ್ರಾಮದಲ್ಲಿ ಯಾರಿಗೆ ಆಹಾರ ಸಾಮಗ್ರಿ, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳು ಅಗತ್ಯ ಇದೆಯೋ ಅಂತಹವರಿಗೆ ಫುಡ್‌ಕಿಟ್ ಹಾಗೂ ಅಗತ್ಯ ತರಕಾರಿ ನೀಡುವ ಭರವಸೆ ನೀಡಿದರು.

ತಹಶೀಲ್ದಾರ್ ತನುಜಾ ಸವದತ್ತಿ, ಉಪ ತಹಸೀಲ್ದಾರ್ ನ್ಯಾಮತಿ ನಾಗರಾಜ್, ಪಿಡಿಒ ಪ್ರದೀಪ್ ಕುಮಾರ್, ಆರೋಗ್ಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಹರಿಹರ : ಬಸವೇಶ್ವರ ಜಯಂತಿ ಸರಳ ಆಚರಣೆಗೆ ನಿರ್ಧಾರ

ಹರಿಹರ, ಮೇ 9- ನಗರದಲ್ಲಿ ಈ ಬಾರಿಯ ಬಸವೇಶ್ವರ ಜಯಂತಿ ಆಚರಣೆಯನ್ನು ಕೋವಿಡ್-19 ಹರಡುವಿಕೆಯ ಪ್ರಮಾಣ ಹೆಚ್ಚಾಗಿರುವುದರಿಂದ ಸರಳವಾಗಿ ಆಚರಣೆ ಮಾಡಲಾಗುತ್ತದೆ ಎಂದು ಶ್ರೀ ಬಸವೇಶ್ವರ ಜಯಂತಿ ಆಚರಣೆ ಸಮಿತಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ ತಿಳಿಸಿದ್ದಾರೆ. ಶ್ರೀ ಮುರುಘರಾಜೇಂದ್ರ ಕಲ್ಯಾಣ ಮಂಟಪದ ಆವರಣದಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿ ಮೂರ್ತಿಗೆ ಬೆಳಿಗ್ಗೆ ಅಭಿಷೇಕ, ವಿಶೇಷ ಪೂಜೆಯನ್ನು ಮಾಡಿ ಸರಳವಾಗಿ ಆಚರಿಸಲಾಗುವುದು. ಈ ಬಾರಿ ಎತ್ತಿನ ಮೆರವಣಿಗೆಯನ್ನು ನಿರ್ಬಂಧಿಸಲಾಗಿದೆ ಎಂದು ಹೇಳಿದ್ದಾರೆ.

## ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಬೆಡ್ ಹೆಚ್ಚಿಸುವಂತೆ ಒತ್ತಾಯ

ಮಲೇಬೆನ್ನೂರು, ಮೇ 9- ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಹರಿಹರದಲ್ಲಿರುವ ತಾ. ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಬೆಡ್‌ಗಳನ್ನು ಕನಿಷ್ಠ 100 ಕ್ಕೆ ಹೆಚ್ಚಿಸುವಂತೆ ಕೊಂಡಜ್ಜಿ ಜಿ.ಪಂ. ಕ್ಷೇತ್ರದ ಸದಸ್ಯರಾದ ಅರ್ಚನಾ ಬೆಳ್ಳೂಡಿ ಬಸವರಾಜ್ ಒತ್ತಾಯಿಸಿದ್ದಾರೆ.

ಆಕ್ಸಿಜನ್ ಬೆಡ್‌ಗಳು ಸಿಗದೆ ನಿತ್ಯ ಸಾವಿನ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಜಿಲ್ಲಾಡಳಿತ ಮನಗಂಡು ಹರಿಹರದ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ವೆಂಟಿಲೇಟರ್‌ಗಳನ್ನು ಬಳಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಸೋಂಕಿತರಿಗೆ ರೆಮ್‌ಡಿಸಿವಿರ್ ಹಾಗೂ ಕೋವಿಡ್‌ಗೆ ಸಂಬಂಧಿಸಿದ ಔಷಧ ಪೂರೈಕೆಗೆ ಒತ್ತು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿರುವ ಅರ್ಚನಾ ಬಸವರಾಜ್ ಅವರು, ಹರಿಹರ ತಾಲ್ಲೂಕಿನ ಕೊರೊನಾ ಸೋಂಕಿತರಿಗೆ ಹರಿಹರದಲ್ಲಿ ಅಗತ್ಯ ಸೌಲಭ್ಯ ಹಾಗೂ ಚಿಕಿತ್ಸೆ ಸಿಗುವಂತೆ ಮಾಡಿದರೆ ಹೆಚ್ಚಿನ ಸಾವು-ನೋವುಗಳನ್ನು ತಪ್ಪಿಸಬಹುದು. ಪ್ರತಿ ಹಳ್ಳಿಗಳಿಗೂ ಕೋವಿಡ್ ಲಸಿಕೆ ಸರಬರಾಜು ಮಾಡುವ ವ್ಯವಸ್ಥೆ ಶೀಘ್ರವೇ ಆದರೆ ಜನರಿಗೆ ಬಹಳ ಅನುಕೂಲವಾಗುತ್ತದೆ ಎಂದು ಅರ್ಚನಾ ಬಸವರಾಜ್ ಹೇಳಿದ್ದಾರೆ.

## ಮಾರ್ಗಸೂಚಿಗಳ ಕಟ್ಟುನಿಟ್ಟಿನ ಆದೇಶ

(1ನೇ ಪುಟದಿಂದ) ಅಧಿಕಾರ ಚಲಾಯಿಸಿ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳು ಜಿಲ್ಲೆಯಾದ್ಯಂತ ಮೇ 10 ರ ಬೆಳಿಗ್ಗೆ 6 ರಿಂದ ಮೇ 24 ರ ಬೆಳಿಗ್ಗೆ 6 ಗಂಟೆವರೆಗೆ ಈ ಪರಿಷ್ಕೃತ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಜಾರಿಗೊಳಿಸಿ ಆದೇಶಿಸಿರುತ್ತಾರೆ.

ಕೋವಿಡ್ 19 ಪರಿಷ್ಕೃತ ಮಾರ್ಗಸೂಚಿಗಳನ್ನು ಮತ್ತು ಕ್ರಮಗಳನ್ನು ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟದ ಪ್ರಾಧಿಕಾರಗಳು ಹಾಗೂ ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶಿಸಿದ್ದಾರೆ.

# ಸೋಂಕಿತರಿಗೆ ಸೌಲಭ್ಯ ಕಲ್ಪಿಸದಿದ್ದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ



### ಉಸ್ತುವಾರಿ ಸಚಿವ ಭೈರತಿ ಸವರಾಜ್

ನ್ಯಾಮತಿ, ಮೇ 9- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಜನರು ಕ್ರಿಯಾಶೀಲ ಶಾಸಕರನ್ನು ಪಡೆದಿದ್ದು, ಅವಳಿ ತಾಲ್ಲೂಕಿಗೆ ಏನು ಬೇಕೋ ಅದನ್ನು ಕೊಡಿಸಲು ನಾನು ಬದ್ಧನಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಮಾದನಬಾವಿಯ ಕೋವಿಡ್ ಕೇರ್ ಸೆಂಟರ್‌ಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ಅವಲೋಕಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಅಧಿಕಾರಿಗಳು ಕೋವಿಡ್ ವಿಚಾರಕ್ಕೆ ಸಂಬಂಧಿಸಿದಂತೆ ಸೋಂಕಿತರಿಗೆ ಸರ್ಕಾರದಿಂದ ನೀಡುವ ಸೌಲಭ್ಯಗಳನ್ನು ಸರಿಯಾಗಿ ನೀಡಬೇಕು. ಇಲ್ಲದೇ ಇದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಇದೇ ವೇಳೆ ಮಾತನಾಡಿದ ರೇಣುಕಾಚಾರ್ಯ, ಕೋವಿಡ್ 2ನೇ ಅಲೆ ಭೀಕರ ವಾಗಿದ್ದು ಯಾರೂ ಕೂಡ ಇದನ್ನು ನಿರ್ಲಕ್ಷಿಸುವುದು ಬೇಡ. ಆಕ್ಸಿಜನ್, ವೆಂಟಿಲೇಟರ್, ಬೆಡ್ ಬೇಕೆಂದು ಸಾಕಷ್ಟು ಜನರು ಕರೆ ಮಾಡುತ್ತಿದ್ದು ಅವರಿಗೆ ಬೆಡ್ ಕೊಡಿಸುವ ಕೆಲಸ ಮಾಡುತ್ತಿದ್ದೇನೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್‌ಪಿ ಹನುಮಂತರಾಯ, ಜಿ.ಪಂ.ಸಿಇಒ ಡಾ. ವಿಜಯ ಮಹಂತೇಶ್ ಬಿ. ದಾನಮ್ಮನವರ್, ಎಸಿ ಮಮತಾ ಎಸ್. ಗೌಡರ್, ನ್ಯಾಮತಿ ತಹಶೀಲ್ದಾರ್ ತನುಜಾ ಸೌದತ್ತಿ, ಹೊನ್ನಾಳಿ ತಹಶೀಲ್ದಾರ್ ಬಸನಗೌಡ ಕೋಟೂರ, ಸಿಪಿಐ ದೇವರಾಜ್, ಹೊನ್ನಾಳಿ ಇಒ ಗಂಗಾಧರಮೂರ್ತಿ, ನ್ಯಾಮತಿ ಇಒ ರಾಮಭೋವಿ, ಪಿಎಸ್‌ಐಗಳಾದ ಬಸವನಗೌಡ ಬಿರಾದಾರ್, ರಮೇಶ್, ಜಿ.ಪಂ. ಸದಸ್ಯ ಮಹೇಶ್, ಹೊನ್ನಾಳಿ ಪುರಸಭಾಧ್ಯಕ್ಷ ಕೆ.ವಿ. ಶ್ರೀಧರ್ ಇನ್ನಿತರರಿದ್ದರು.

## ನಿಷೇಧಾಜ್ಞೆ ಜಾರಿ

(1ನೇ ಪುಟದಿಂದ) ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ನು ಉಲ್ಲಂಘಿಸಿದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ 2005 ರ 51 ರಿಂದ 60 ಹಾಗೂ ಐಪಿಸಿ ಸೆಕ್ಷನ್ 188 ಮತ್ತು ಕರ್ನಾಟಕ ಎಪಿಡೆಮಿಕ್ ಡಿಸೀಸಸ್ ಆಕ್ಟ್ 2020 ರ ಸೆಕ್ಷನ್ 4, 5 ಮತ್ತು 10 ರಡಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಡಿಸಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## 3ನೇ ಅಲೆ ತೀವ್ರತೆ ಇಳಿಸಬಹುದು

(1ನೇ ಪುಟದಿಂದ) ಮೂರನೇ ಅಲೆ ಎಲ್ಲಾ ಸ್ಥಳಗಳಲ್ಲಿ ಸಂಭವಿಸದೇ ಇರಬಹುದು ಅಥವಾ ಯಾವುದೇ ಕಡೆಯಲ್ಲೂ ಸಂಭವಿಸದೇ ಇರಬಹುದು ಇದೆಲ್ಲವೂ ಸ್ಥಳೀಯ ಹಂತದಲ್ಲಿ ಸರ್ಕಾರಗಳು ತೆಗೆದುಕೊಳ್ಳುವ ಕ್ರಮಗಳನ್ನು ಅವಲಂಬಿಸಿದೆ ಎಂದವರು ತಿಳಿಸಿದ್ದಾರೆ.

ಕೊರೊನಾದ ರೂಪಾಂತರ ಸಾಮಾನ್ಯ ಪ್ರಕ್ರಿಯೆ ಯಾಗಿದೆ. ಆದರೆ, ರೂಪಾಂತರ ವಾದರೂ ಲಸಿಕೆ, ತಡೆ ಹಾಗೂ ಚಿಕಿತ್ಸೆಯ ಮೇಲೆ ಪರಿಣಾಮವಾ ಗುವುದಿಲ್ಲ ಎಂದು ಪರಿಣಿತರು ಹೇಳಿದ್ದಾರೆ.

## ಬೈಕ್, ಕಾರ್ ಸೀಜ್ ಮಾಡಿದ ಪೊಲೀಸರು



ಮಲೇಬೆನ್ನೂರು

ಮಲೇಬೆನ್ನೂರು, ಮೇ 9- ಪಟ್ಟಣದಲ್ಲಿ ಲಾಕ್‌ಡೌನ್ ನಿಯಮ ಉಲ್ಲಂಘನೆ ಮಾಡಿ ಅನಧಿಕೃತವಾಗಿ ಸಂಚರಿಸುತ್ತಿದ್ದ 10 ಬೈಕ್ ಹಾಗೂ 4 ಕಾರ್‌ಗಳನ್ನು ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ್ ಅವರ ನೇತೃತ್ವದಲ್ಲಿ ಸಿಪಿಐ ಸತೀಶ್, ಪಿಎಸ್‌ಐ ವೀರಬಸಪ್ಪ ಕುಸುಲಾಪುರ ಅವರು ಸೀಜ್ ಮಾಡಿ, ಕೇಸು ದಾಖಲಿಸಿದ್ದಾರೆ.

ಪಟ್ಟಣದ ಮುಖ್ಯರಸ್ತೆ, ಸಂತೆ ರಸ್ತೆ, ನಂದಿಗುಡಿ ರಸ್ತೆ ಪೇಟೆ ಬೀದಿಯಲ್ಲಿ ಬೆಳಿಗ್ಗೆ 10 ಗಂಟೆಯ ನಂತರ ವಿನಾಕಾರಣ ಸಂಚರಿಸುತ್ತಿದ್ದ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

**ಎಚ್ಚರಿಕೆ :** ಸೋಮವಾರದಿಂದ ಸಂಪೂರ್ಣ ಲಾಕ್‌ಡೌನ್ ಜಾರಿಯಾಗಲಿದ್ದು, ಈ ವೇಳೆ ಯಾರಾದರೂ ನಿಯಮ ಉಲ್ಲಂಘಿಸಿದರೆ ಶಿಸ್ತು ಕ್ರಮ ಗ್ಯಾರೆಂಟಿ ಎಂಬ ಎಚ್ಚರಿಕೆಯನ್ನು ಪಿಎಸ್‌ಐ ವೀರಬಸಪ್ಪ ಅವರು ವಾಹನ ಚಾಲಕರಿಗೆ ನೀಡಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ
30x50 30x50 West ಅಕ್ಕ-ಪಕ್ಕ,
30x57 30x57 East ಅಕ್ಕ-ಪಕ್ಕ,
30x40 west, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
Late Manney Mangamani ಇವರ ಜ್ಞಾಪಕಾರ್ಥವಾಗಿ
Manney Subbu Rao & Son : Manney Prabhakar & Family, Vishakapttanam
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಆಯುಷ್ ಚಾರಿಟೇಬಲ್ ಟ್ರಸ್ಟ್**
**ಆಯುಷ್ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧರು, ಅಂಗವಿಕಲರು, ಪಾರ್ಶ್ವವಾಯು ಪೀಡಿತರು ಹಾಗೂ ರೋಗಿಗಳ ಆರೈಕೆ ಮಾಡಲಾಗುವುದು.
ವಿದ್ಯಾನಗರ, ದಾವಣಗೆರೆ.
97315 11795

**ಸೈಟ್‌ಗಳು ಮಾರಾಟಕ್ಕಿವೆ**
ಬಾಟ್ಲಿ ಬಿಲ್ಡಿಂಗ್ ಹಿಂಭಾಗ, ಗ್ಲಾಸ್ ಹೌಸ್ ಹತ್ತಿರ
30x50 East, 60x50 East,
40x70 East, 30x60 East,
30x50 30x50 East ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಿಲ್ಡಿಂಗ್ ಮಾರಾಟಕ್ಕಿದೆ**
ವೈಷ್ಣವಿ ನಿಲಯ, 3ನೇ ಬಸ್ ಸ್ಟಾಪ್, 10ನೇ ಕ್ರಾಸ್, ಟಿ.ಬಿ. ಬಡಾವಣೆ, ವಿದ್ಯಾನಗರ, ದಾವಣಗೆರೆ.
30x40 ಅಳತೆಯ (33 ಚದರ)
3 ಮಹಡಿ ಮನೆ ಮಾರಾಟಕ್ಕಿದೆ.
95387 56409, 93410 21209

**ಜಮೀನು ಮಾರಾಟಕ್ಕಿದೆ**
**ಹರಿಹರ - ದಾವಣಗೆರೆ**
74112 50447

**ಸೈಟ್‌ಗಳು ಬೇಕಾಗಿದೆ**
ತಕ್ಷಣವೇ ಮಾರಾಟಕ್ಕೆ 30x40/30x50 ಅಳತೆಯ ಪೂರ್ವ/ಉತ್ತರ ದಿಕ್ಕಿನ ಸೈಟು ಬೇಕಾಗಿದೆ.
ಎಸ್. ನಿಜಲಿಂಗಪ್ಪ ಬಡಾವಣೆ, ವಿದ್ಯಾನಗರ, ಸಿದ್ದವೀರಪ್ಪ ಬಡಾವಣೆ ಮತ್ತು ವಿವೇಕಾನಂದ ಬಡಾವಣೆಗಳಲ್ಲಿ (ಬ್ರೋಕರ್‌ಗಳನ್ನು ಹೊರತುಪಡಿಸಿ)
ಸಂಪರ್ಕಿಸಿ
98445 44957

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಗ್ಲಾಸ್ ಹೌಸ್ ಹತ್ತಿರ, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ
ಪಶ್ಚಿಮ: 30x50, ದಕ್ಷಿಣಕ್ಕೆ : 40x40 ಅಳತೆಯುಳ್ಳ ಸೈಟುಗಳು ಮಾರಾಟಕ್ಕಿವೆ.
90198 88512, 96111 50888

**ಮನೆ ಬಾಡಿಗೆಗೆ**
ಪೂರ್ವ ಮುಖ ದಿಕ್ಕಿನ ಗ್ರೌಂಡ್ ಫ್ಲೋರ್ 2BHK, 30x40 ಸೈಜ್
ಹೊಸ ಚರ್ಚ್ ಹಿಂಭಾಗ, ಸರಸ್ವತಿ ನಗರ, ದಾವಣಗೆರೆ.
96200 56056
99641 10489

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ,
ಸರ್ವೆ ನಂ.335/A 4-08 ಸೆಂಟ್ಸ್,
ಸರ್ವೆ ನಂ.335/B 2-43 ಸೆಂಟ್ಸ್,
ಸರ್ವೆ ನಂ.335/1 1-62 ಸೆಂಟ್ಸ್,
ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ನಾಯ್ಡು ಹೋಟೆಲ್**
ಪಾರ್ಸಲ್ ವ್ಯವಸ್ಥೆ ಇರುತ್ತದೆ,
ಡೋರ್ ಡೆಲಿವರಿ ಎಕ್ಸ್ ಟ್ರಾ ಚಾರ್ಜ್
08192 234611
80889 56656

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA,
All PG & Diploma Courses
S.S. Global Institute for Higher Education, Davanagere.
63619 00533, 72593 59861

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಲ್.ಐ.ಸಿ. ಕಾಲೋನಿ, 4ನೇ ಮುಖ್ಯ ರಸ್ತೆ, ನೂತನ ಕಾಲೇಜು ಹಿಂಭಾಗ, ಪೂರ್ವದಿಕ್ಕಿನ, ಸಂಪೂರ್ಣ ವಾಸ್ತುವುಳ್ಳ, 3 ಬೆಡ್‌ರೂಂ ಮನೆ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿದ್ದು ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
93410 12022

**ನರ್ಸಿಂಗ್ ಸೇವೆಗಳು**
HOME NURSING
ಮನೆಯಲ್ಲಿರುವ ರೋಗಿಗಳನ್ನು ಹಾಗೂ ವೃದ್ಧರ ಆರೈಕೆಗಾಗಿ, BP, SUGAR, DRESSING, NEBULIZATION, ಸಂಪರ್ಕಿಸಿ
90711 06106

**REQUIRED**
INTERNS/DUTY DOCTORS (MBBS/BAMS/BHMS), COMPUTER OPERATOR, NURSE, OT TECHNICIAN, FEMALE RECEPTIONIST, DRIVERS, AYAS/WARD BOY
Contact :
drshashi.in@gmail.com
9916931407

ಕೊಳ್ಳೇಗಾಲದಿಂದ ನೇರ ಪರಿಹಾರ
ಕೊಳ್ಳೇಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್
ಶ್ರೀ ರುಂಡ ಮಾಲಿನಿ ಉಪಾಸಕರು, ಶ್ರೀ ದುರ್ಗಾದೇವಿ ಜ್ಯೋತಿಷ್ಯರು. ಪ್ರಸಿದ್ಧ ರಕ್ತಕಾರೇಶ್ವರಿಯ ದಿವ್ಯ ಶಕ್ತಿಗಳಿಂದ ಕಠೋರ ಸಾಧನೆಗಳಿಂದ ಜನರಲ್ಲಿ ಸರ್ವಸಿದ್ಧಿ ಜ್ಯೋತಿಷ್ಯ ಸಾಧಕರು ಪಂ.ದುರ್ಗಾ ಪ್ರಸಾದ್ ಗುರೂಜಿ. ನಿಮ್ಮ ಸಮಸ್ಯೆಗಳು ಏನೇ ಇರಲಿ ವೈಷ್ಣವಿ ದೇವಿ ಬಲಿಷ್ಠ ಪೂಜೆಯಿಂದ ಕೇವಲ 3 ದಿನಗಳಲ್ಲಿ 100% ಪರಿಹಾರ ಶತಃಸಿದ್ಧ.
98807 30952

WORK FROM HOME FOR MEDICAL STUDENTS
INTERNS, DOCTORS (MBBS/BAMS/BHMS) NURSES/ NURSING STUDENTS, TELECALLERS
Contact :
shashijayan@gmail.com
9448178094

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ADVANCE SPOKEN ENGLISH & GRAMMAR**
Online Live Class Started, Join Immediately
Study IQ Academy, Davangere.
8951717444, 9740215992

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 9.5.2021ರ ಭಾನುವಾರದಂದು ನಿಧನರಾದ
**ಶ್ರೀ ಪುಂಡಲೀಕರಾವ್ ಬೊಂಗಾಳೆ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
✦ ಎಂ.ಜಿ. ಶ್ರೀನಿವಾಸರಾವ್
✦ ಶ್ರೀಮತಿ ನಿರ್ಮಲ ಮತ್ತು ಎಂ.ಎಸ್. ವಿಠ್ಠಲ್, ಮಾಜಿ ಮಹಾಪೌರರು, ನಗರ ಪಾಲಿಕೆ
✦ ಎಂ.ವಿ. ಸುಮಂತ್
✦ ಶ್ರೀಮತಿ ತೇಜಸ್ವಿನಿ ಮತ್ತು ಪ್ರತೀಕ್
✦ ಕು. ಸ್ವಾತಿ ✦ ಕು. ಅಮೃತವರ್ಷಿಣಿ ✦ ಕು. ಗುಣಶ್ರೀ
**ಮಹೇಂದ್ರಕರ್ ಟೆಕ್ಸ್‌ಟೈಲ್ಸ್**
ನರಸರಾಜ ರಸ್ತೆ, ದಾವಣಗೆರೆ.

**ಪ್ರಥಮ ವರ್ಷದ ಪುಣ್ಯಸ್ಮರಣೆ**



ಜನನ : 13.03.1954
ನಿಧನ : 10-05-2020
**ದಿ|| ಶ್ರೀಮತಿ ಪ್ರಭಾವತಿ**
'ನೀನಿಲ್ಲದ ಜೀವನ, ಶೃತಿ ಲಯವಿಲ್ಲದ ಗಾನ'
ನಿಮ್ಮ ಪ್ರೀತಿ, ಯೋಚನೆಗಳು ಮತ್ತು ನಿಮ್ಮ ಹಾರೈಕೆ ಸದಾ ನಮ್ಮಲ್ಲಿರುತ್ತವೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಪತಿ : ಪ್ರೊ. ಯು. ಗುರುಸ್ವಾಮಿ
ಮಕ್ಕಳು : ಪ್ರದೀಪ್‌ಕುಮಾರ್, ಡಾ. ಕವಿತಾ, ಡಾ. ರಂಜಿತಾ
ಅಳಿಯಂದಿರು : ರಾಘು, ಮುರಳೀಧರ್, ಸೊಸೆ : ಲಲಿತಾ
ಮೊಮ್ಮಕ್ಕಳು : ನಿಕಿತಾ, ಪೃಥ್ವಿ, ಕಾಶ್ವೀ ಮತ್ತು ಧೃವ
ಬಂಧುಗಳು ಮತ್ತು ಅಪಾರ ಸ್ನೇಹಿತರು.


## ಜಗಳೂರಿನಲ್ಲಿ ಬಿರುಗಾಳಿ : ಹಾನಿ

(1ನೇ ಪುಟದಿಂದ) ಬಂದ ಅಡಿಕೆ ಮರಗಳು ಗಾಳಿ ರಭಸಕ್ಕೆ ನೆಲಕ್ಕುರುಳಿವೆ. ಕುಬೇರಪ್ಪ, ಸುರೇಂದ್ರಪ್ಪ, ತಳವಾರ ಹನುಮಂತಪ್ಪ, ಸೇರಿದಂತೆ ಅನೇಕರ ಎಲೆಬಳ್ಳಿ ತೋಟಗಳು ಸಂಪೂರ್ಣವಾಗಿ ಬಿದ್ದು ನಾಶವಾಗಿವೆ. ಕೆಲವರ ಮನೆಗಳ ತಗಡು ಹಾರಿ ಹೋಗಿವೆ. ಲಕ್ಷಾಂತರ ರೂ. ನಷ್ಟವಾಗಿದೆ. ಜನರಿಗೆ ಯಾವುದೇ ಪ್ರಾಣಹಾನಿಯಾಗಿಲ್ಲ.


ಗಾಳಿ ಸಹಿತ ಮಳೆಗೆ ಫಸಲಿಗೆ ಬಂದ ಅನೇಕ ಮರಗಳು, ಎಲೆ ಬಳ್ಳಿ ತೋಟಗಳು, ಮನೆಗಳ ತಗಡುಗಳು, ವಿದ್ಯುತ್ ಕಂಬಗಳು ಬಿದ್ದಿದ್ದು, ಲಕ್ಷಾಂತರ ನಷ್ಟವಾಗಿದೆ. ತ್ವರಿತಗತಿಯಲ್ಲಿ ಬೆಸ್ಕಾಂನವರು ಕಂಬಗಳನ್ನು ಹಾಕಿ ವಿದ್ಯುತ್ ಕೊಡಬೇಕು. ಇದುವರೆಗೆ ಬೆಳೆ ನಷ್ಟದ ಬಗ್ಗೆ ಸ್ಥಳ ಪರಿಶೀಲಿಸಿ, ಸರ್ಕಾರಕ್ಕೆ ನಷ್ಟದ ವರದಿ ಮಾಡಲು ಕಂದಾಯ ಇಲಾಖೆ ಅಧಿಕಾರಿಗಳಾಗಲೀ, ತೋಟಗಾರಿಕಾ ಕೃಷಿ ಅಧಿಕಾರಿಗಳಾಗಲೀ ಬಂದಿಲ್ಲ ಎಂದು ಯರ್ಲಕಟ್ಟೆ ಗ್ರಾಮದ ರೈತ ಮಂಜಣ್ಣ ಅಳಲು ತೋಡಿಕೊಂಡಿದ್ದಾರೆ.

## ಕುರುಡಿಮಠ ನಿಧನಕ್ಕೆ ಸಂತಾಪ



ದಾವಣಗೆರೆ, ಮೇ 9- ಜನನಿ ಫೌಂಡೇಶನ್ ಅಧ್ಯಕ್ಷರಾಗಿದ್ದ ಶಿವಪ್ರಸಾದ್ ಕುರುಡಿಮಠ ಅವರ ನಿಧನಕ್ಕೆ ಜನನಿ ಫೌಂಡೇಶನ್ ಪದಾಧಿಕಾರಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಕಳೆದ ಬಾರಿಯ ಲಾಕ್‌ಡೌನ್ ಸಂದರ್ಭದಲ್ಲಿ ಶಿವಪ್ರಸಾದ್ ಅವರು ತನ್ನ ಗೆಳೆಯರ ಜೊತೆಗೂಡಿ ಜನರಿಗೆ ಔಷಧಿ, ಮಾಸ್ಕ್, ಸ್ಯಾನಿಟೈಜರ್, ಫುಡ್ ಕಿಟ್‌ಗಳನ್ನು ವಿತರಿಸಿದ್ದನ್ನು ಸ್ಮರಿಸಿದ ಸ್ನೇಹಿತರು, ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

### ಎಂ. ಗುರುಬಸಪ್ಪ ನಿಧನ




ದಾವಣಗೆರೆ ಹಳೆಪೇಟೆ ವಾಸಿ, ಶ್ರೀ ಎಂ. ಗುರುಬಸಪ್ಪ (69) ಅವರು ದಿನಾಂಕ 9.5.2021ರ ಭಾನುವಾರ ಬೆಳಿಗ್ಗೆ 10.25ಕ್ಕೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.5.2021ರ ಭಾನುವಾರ ಹೈಟೆಕ್ ಆಸ್ಪತ್ರೆಯ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಿತು.

## ಹೆಚ್ಕೆಆರ್‌ಗೆ ಶಾಸಕ ರಾಮಪ್ಪ, ಬಿ.ಪಿ. ಹರೀಶ್ ಸಂತಾಪ

ಮಲೇಬೆನ್ನೂರು, ಮೇ 9- ಹೆಚ್ಕೆಆರ್ ನಿಧನದಿಂದಾಗಿ ದಾವಣಗೆರೆ ಜಿಲ್ಲೆ ನ್ಯಾಯಪರ ಹೋರಾಟಗಾರರನ್ನು ಕಳೆದುಕೊಂಡಂತಾಗಿದೆ ಎಂದು ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಇತರರು ಸಂತಾಪ ವ್ಯಕ್ತಪಡಿಸಿದ್ದಾರೆ.

### ಶಾಮನೂರು ಗೌಡ್ರು ಪ್ರೇಮಲೀಲಾ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ದಿ|| ಶ್ರೀಮತಿ ಎಸ್.ಕೆ. ನಿಂಗಮ್ಮ ಮತ್ತು ದಿ|| ಗೌಡ್ರು ಮಹಾದೇವಪ್ಪನವರ ಪುತ್ರಿ ಹಾಗೂ ಗೌಡ್ರು ಎಸ್.ಜಿ. ಮಲ್ಲಿಕಾರ್ಜುನ (ಬಾಬು) ಅವರ ಸಹೋದರಿ **ಎಸ್.ಜಿ. ಪ್ರೇಮಲೀಲಾ** ಅವರು ದಿನಾಂಕ 9.5.2021ರ ಭಾನುವಾರ ರಾತ್ರಿ 10.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.5.2021ರ ಸೋಮವಾರ ಮಧ್ಯಾಹ್ನ 11 ಗಂಟೆಗೆ ಶಾಮನೂರಿನ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ
ಮೊಬೈಲ್ : 94484 15188, 94819-62206

## ಲಾಕ್‌ಡೌನ್ : ಗ್ರಾಮೀಣರ ದಂಗೆ

(1ನೇ ಪುಟದಿಂದ) ಹೊತ್ತುಕೊಂಡು ಬರಬೇಕೇ ಮುಖ್ಯಮಂತ್ರಿಗಳೇ? ಆಯಾಸ-ಪ್ರಯಾಸದಿಂದ ಅವರಿಗೇನಾದರೂ ಆಗಿಬಿಟ್ಟರೆ ಯಾರು ಹೊಣೆ? ಈ ಸಾಮಾನ್ಯ ಜ್ಞಾನವೂ ಆಡಳಿತ ನಡೆಸುವವರಿಗೆ ಬೇಡವೇ? ಎಂದು ಪ್ರಶ್ನಿಸಿದ್ದಾರೆ.

ಹೊಸ ಲಾಕ್‌ಡೌನ್ ನಿಯಮಾವಳಿ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕು, ಎಟಿಎಂ ಆಸ್ಪತ್ರೆ ತೆರೆದಿರುತ್ತದೆ. ಆದರೆ ಅಲ್ಲಿಗೆ ಗ್ರಾಹಕರು ಮತ್ತು ಅಸ್ವಸ್ಥರು ವಾಹನ ಬಳಸಲು ನಿಷೇಧ ಇದೆ. ಹೋಟೆಲ್‌ನಲ್ಲಿ ಪಾರ್ಸಲ್‌ಗೆ ಅವಕಾಶ ಇದೆ. ವಾಹನ ಮಾತ್ರ ಬಳಸುವಂತಿಲ್ಲ. ಇದೆಂತಹ ತುಘಲಕ್ ಸರ್ಕಾರ? ಎಂದು ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡಿದ್ದಾರೆ.

ಹೊಸ ಲಾಕ್‌ಡೌನ್ ಜಾರಿಗೆ ತರಲು ಹೊರಟಿರುವ ರಾಜ್ಯದ ಆಡಳಿತಗಾರರು ಮತ್ತು ಅಧಿಕಾರಿಗಳು ಮೊದಲು ಬೆಂಗಳೂರಿನ ಹವಾ ನಿಯಂತ್ರಿತ ಕಚೇರಿಯಿಂದ ಹೊರಬಂದು ಹಳ್ಳಿಗಳಿಗೆ ಭೇಟಿ ನೀಡಿ ಅಲ್ಲಿನ ವಾಸ್ತವ ಸ್ಥಿತಿಯನ್ನು ಅರಿಯಲಿ ಎಂದವರು ಆಗ್ರಹಿಸಿದ್ದಾರೆ.

ಕೊರೊನಾ ನಿಯಂತ್ರಿಸಲು ಲಾಕ್‌ಡೌನ್ ಅನಿವಾರ್ಯ ಆಗಿರುವುದು ನಿಜ. ಆದರೆ, ಮುಖ್ಯಮಂತ್ರಿ ಯಡಿಯೂರಪ್ಪ ಅವರು ಏಕಪಕ್ಷೀಯ ನಿರ್ಧಾರ ಕೈಗೊಳ್ಳದೆ ಜಿಲ್ಲಾಧಿಕಾರಿಗಳಿಂದ ವಾಸ್ತವ ಸ್ಥಿತಿಯ ವರದಿ ಪಡೆಯಬೇಕಾಗಿತ್ತು.

ಇದರಿಂದ ಪೊಲೀಸರು ಮತ್ತು ಜನತೆಯ ನಡುವಿನ ಸಂಘರ್ಷವನ್ನು ತಪ್ಪಿಸಿದಂತಾಗುತ್ತಿತ್ತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

## ಲಸಿಕೆ ಕೊರತೆ : ನಾಗರಿಕರಲ್ಲಿ ಆತಂಕ


(1ನೇ ಪುಟದಿಂದ) ಸುಮಾರು 200 ಕೋವ್ಯಾಕ್ಸಿನ್ ಲಸಿಕೆ ಜಿಲ್ಲಾಸ್ಪತ್ರೆಯಲ್ಲಿ ಹಾಕಲಾಗುವುದು. ತಲಾ 100 ಲಸಿಕೆ ನಗರ ಪ್ರದೇಶದ 7 ಕೇಂದ್ರಗಳಲ್ಲಿ 2ನೇ ಹಂತದ ಲಸಿಕೆ ಪಡೆಯಬೇಕಾದವರಿಗೆ ಕೋವಿಶೀಲ್ಡ್ ಲಸಿಕೆ ಹಾಕಲಾಗುತ್ತದೆ. ಕೋವ್ಯಾಕ್ಸಿನ್ ಲಸಿಕೆಗೆ ಕಾಯಬೇಕಾಗಿದೆ ಎಂದು ಡಾ. ಮೀನಾಕ್ಷಿ ತಿಳಿಸಿದ್ದಾರೆ. ಕಳೆದ ವಾರ 35 ಸಾವಿರ ಮಂದಿ 2ನೇ ಹಂತದ ಲಸಿಕೆ ಪಡೆಯಬೇಕಾದವರಿದ್ದರು. ಈ ವಾರ 10 ಸಾವಿರ ಮಂದಿ ಇದ್ದು, 10 ಸಾವಿರ ಕೋವಿಶೀಲ್ಡ್ ಲಸಿಕೆ ಸಿಕ್ಕಿದೆ. ಮುಂದಿನ ವಾರ ಜನಸಂಖ್ಯೆಗೆ ಅನುಗುಣವಾಗಿ ಲಸಿಕೆ ಸಿಗಲಿದೆ. ಮೊದಲ ಲಸಿಕೆ ಪಡೆಯಬೇಕಾದವರು 4 ಲಕ್ಷದ 34 ಸಾವಿರ ಮಂದಿ 45 ವರ್ಷ ಮೇಲ್ಪಟ್ಟವರಿದ್ದರು. 1 ಲಕ್ಷದ 80 ಸಾವಿರ ಮಂದಿಗೆ ಮೊದಲ ಲಸಿಕೆ ಹಾಕಲಾಗಿದ್ದು, ಇನ್ನೂ 2.50 ಲಕ್ಷ ಜನ 45 ವರ್ಷ ಮೇಲ್ಪಟ್ಟವರಿದ್ದಾರೆಂದು ಮಾಹಿತಿ ನೀಡಿದರು.

## ರೈಲ್ವೆ ಪ್ರಯಾಣಿಕರಿಗೆ ಆಹಾರ ವಿತರಣೆ




ರಾಣೇಬೆನ್ನೂರು, ಮೇ 9- ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಇಲ್ಲಿನ ನಗರ ಠಾಣೆ ಪೊಲೀಸರು ಡಿವೈಎಸ್ಪಿ ಪುಷ್ಪಲತಾ, ಪಿಎಸ್‌ಐ ಎನ್.ಹೆಚ್. ಗೂಳೇರ ಅವರ ನೇತೃತ್ವದಲ್ಲಿ ಮಧ್ಯಾಹ್ನದ ಊಟ, ತಂಪು ಪಾನೀಯ, ನೀರಿನ ಬಾಟಲ್‌ಗಳನ್ನು ವಿತರಿಸಲಾಯಿತು.

### ಹಳೇಬಾತಿ ಅಗಸನಕಟ್ಟೆ ರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ಅಗಸನಕಟ್ಟೆ ರಾಜಪ್ಪ (58) ಅವರು ದಿನಾಂಕ 9.05.2021 ರಂದು ಭಾನುವಾರ ರಾತ್ರಿ 11.15 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಸಹೋದರಿ, ಓರ್ವ ಸಹೋದರ, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.05.2021 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಹಳೇಬಾತಿ ಗ್ರಾಮದ ಅವರ ಜಮೀನಿನಲ್ಲಿ ನೆರವೇರಲಿದೆ.

### ಬಾಡದ ಅನ್ನಪೂರ್ಣಮ್ಮ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 5ನೇ ಕ್ರಾಸ್ ವಾಸಿ ದಾವಣಗೆರೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಶಿವರಾಜ್ ಪಾಟೀಲ್ ಅವರ ತಾಯಿ ಹಾಗೂ ದಿ|| ಬಾಡದ ಕೆ.ಎಂ. ಚಂದ್ರಶೇಖರಯ್ಯ ಅವರ ಪತ್ನಿ ಶ್ರೀಮತಿ ಅನ್ನಪೂರ್ಣಮ್ಮ (81) ಅವರು ದಿನಾಂಕ 9.5.2021ರ ಭಾನುವಾರ ಬೆಳಗಿನ ಜಾವ 5 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.5.2021ರ ಭಾನುವಾರ ಬೆಳಿಗ್ಗೆ 9 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

## ಲಯನ್ಸ್‌ನಿಂದ ಆಹಾರದ ಕಿಟ್ ವಿತರಣೆ



ದಾವಣಗೆರೆ, ಮೇ 9- ಲಯನ್ಸ್ ಕ್ಲಬ್ ಆಶ್ರಯದಲ್ಲಿ ಸಿ.ಜಿ. ಆಸ್ಪತ್ರೆ ಮತ್ತು ಚಾಮರಾಜಪೇಟೆಯ ಹೆರಿಗೆ ಆಸ್ಪತ್ರೆ ಮತ್ತು ಯುನಿಟಿ ಹೆಲ್ತ್ ಸೆಂಟರ್‌ನಲ್ಲಿ 6ನೇ ದಿನದ ಆಹಾರ ಪೊಟ್ಟಣ ಮತ್ತು ನೀರಿನ ಬಾಟಲ್‌ಗಳನ್ನು ಲಯನ್ಸ್ ಕ್ಲಬ್ ಉಪಾಧ್ಯಕ್ಷ ಎನ್. ಆರ್. ನಾಗಭೂಷಣ್ ರಾವ್ ನೇತೃತ್ವದಲ್ಲಿ ವಿತರಿಸಲಾಯಿತು.

ಈ ಸೇವಾ ಕಾರ್ಯಕ್ರಮವನ್ನು ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್ ಅವರು ಉದ್ಘಾಟಿಸಿದರು. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ ಅವರ ಅಧ್ಯಕ್ಷತೆ ವಹಿಸಿದ್ದರು. ದಾನಿ ಮಹಾಂತೇಶ್ ವಿ. ಒಣರೊಟ್ಟಿ, ನೀಲಿ ಉಮೇಶ್, ಗೋವಿಂದ್‌ರಾಜ್, ಕ್ಲಬ್ ಮ್ಯಾನೇಜರ್ ನಾಗರಾಜ್ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹೆಚ್ಕೆಆರ್‌ಗೆ ಪಂಚಮಸಾಲಿ, ವಾಲ್ಮೀಕಿ, ಕಾಗಿನೆಲೆ, ನಂದಿಗುಡಿ ಶ್ರೀಗಳ ಸಂತಾಪ

ಮಲೇಬೆನ್ನೂರು, ಮೇ 9- ಕಾರ್ಮಿಕ ಮುಖಂಡ, ಹೋರಾಟಗಾರ ಹೆಚ್.ಕೆ. ರಾಮಚಂದ್ರಪ್ಪ ಅವರ ನಿಧನಕ್ಕೆ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ನಂದಿಗುಡಿ ಬೃನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ವೇಮನ ಗುರುಪೀಠದ ಶ್ರೀ ವೇಮನಾನಂದ ಸ್ವಾಮೀಜಿ ಅವರು ಕಂಬನಿ ಮಿಡಿದಿದ್ದಾರೆ.

# ಪ.ಪಂಗಾಳದಲ್ಲಿ ಎಡರಂಗದ ಭವಿಷ್ಯ ಡೋಲಾಯಮಾನ

**ಬಿಜೆಪಿ, ತೃಣಮೂಲ ನಡುವೆ ಕಳೆದು ಹೋದ ಎಡಪಕ್ಷಗಳು**

ಕೊಲ್ಕೊತಾ, ಮೇ 9 – ಕಳೆದ ವಾರ ನಡೆದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ನೆಲಕಚ್ಚಿರುವುದು, ಅದರ ಭವಿಷ್ಯ ಕುರಿತು ಪ್ರಶ್ನಿಸುವಂತೆ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಚಿರಕಾಲ ಎಂಬ ಸಮಯ ಹೋಗಿ, ಈಗ ಚೇತರಿಕೆಯೇ ಅನುಮಾನ ಎಂದು ಭಾಸವಾಗುವ ಪರಿಸ್ಥಿತಿ ಇದೆ.

ಎಡರಂಗ ಪಶ್ಚಿಮ ಬಂಗಾಳದಲ್ಲಿ ಸುದೀರ್ಘ 34 ವರ್ಷಗಳ ಕಾಲ ಆಡಳಿತ ನಡೆಸಿತ್ತು. ಆದರೆ, 2021ರ ಚುನಾವಣೆಯಲ್ಲಿ ಅದರ ಮತ ಗಳಿಕೆ ಕೇವಲ ಶೇ.5.47 ಆಗಿದೆ. 2011ರಲ್ಲಿ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಎದುರು ಸೋತಾಗಲೂ ಎಡರಂಗದ ಮತ ಪಾಲು ಶೇ.30.1ರಷ್ಟಿತ್ತು.

ಕಳೆದ ಚುನಾವಣೆ ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ನೇರ ಹೋರಾಟವಾಗಿತ್ತು. ಇದರಲ್ಲಿ ಎಡಪಕ್ಷಗಳು ನಗಣ್ಯವಾಗಿದ್ದವು.

2016ರ ವಿಧಾನಸಭಾ ಚುನಾವಣೆಯಲ್ಲೂ ಸಹ ಎಡಪಕ್ಷಗಳು ಶೇ.25.69ರಷ್ಟು ಮತ ಪಡೆಯಲು ಯಶಸ್ವಿಯಾಗಿದ್ದವು. ಈ ಬಾರಿ ಗೌರವ ತರುವಷ್ಟು ಮತಗಳನ್ನು ಪಡೆಯಲೂ ಸಾಧ್ಯವಾಗಿಲ್ಲ.

ಆಡಳಿತ ವಿರೋಧಿ ಮನೋಭಾವಕ್ಕಿಂತ ಬಿಜೆಪಿಬಂಗಾಳದಲ್ಲಿಬರದಂತೆತಡೆಯುವುದೇ ಜನರ ಉದ್ದೇಶವಾಗಿತ್ತು. ಹೀಗಾಗಿ ನಾವು ಸೋತೆವು ಎಂದು ಸಿಪಿಐ (ಎ) ಪಾಲಿಟ್ ಬ್ಯೂರೋ ಸದಸ್ಯ ನಿಲೋತ್‌ಪಾಲ್ ಬಸು ಹೇಳಿದ್ದಾರೆ.

ಸಾಮಾನ್ಯವಾಗಿ ಎಡರಂಗಕ್ಕೆ ಬರುತ್ತಿದ್ದ ಕನಿಷ್ಠ ಶೇ.5ರಷ್ಟು ಮತಗಳು ತೃಣಮೂಲ ಕಾಂಗ್ರೆಸ್‌ಗೆ ಹೋಗಿವೆ. ಮತದಾರರು ಸರ್ಕಾರದ ಭ್ರಷ್ಟಾಚಾರದಂತಹ ವಿಷಯಗಳನ್ನು ಬದಿಗೊತ್ತಿ, ಬಿಜೆಪಿಯನ್ನು ತಡೆಯುವುದಕ್ಕೇ ಆದ್ಯತೆ ನೀಡಿದ್ದಾರೆ ಎಂದವರು ತಿಳಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಶೇ.40ರಷ್ಟು ಮತ ಪಡೆದಿತ್ತು. ಎಡರಂಗ ಹಾಗೂ ಕಾಂಗ್ರೆಸ್‌ಗಳು ಬಿಜೆಪಿಗೆ ದಾರಿ ಮಾಡಿಕೊಟ್ಟಿದ್ದವು. ಈ ಬಾರಿ ಎಡರಂಗದ ಮತಗಳು ತೃಣಮೂಲ ಕಾಂಗ್ರೆಸ್‌ಗೆ ಹೋಗಿವೆ ಎಂದು ಸಿಪಿಐ (ಎಎಲ್) ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಹೇಳಿದ್ದಾರೆ. ಈ ಚುನಾವಣೆಯಲ್ಲಿ ದೀಪಂಕರ್ ಪಕ್ಷ 'ಬಿಜೆಪಿಗೆ ಮತ ಬೇಡ' ಎಂಬ ಅಭಿಯಾನ ನಡೆಸಿತ್ತು.

ಎಡರಂಗದ ಮತ ಗಳಿಕೆ ತೀವ್ರವಾಗಿ ಕಡಿಮೆಯಾಗಿರುವುದು ಸಿಪಿಐ (ಎಂ) ಕಾರ್ಯಕರ್ತರಲ್ಲಿ ಹಾಗೂ ಪಕ್ಷದ ಕೇಂದ್ರೀಯ ನಾಯಕತ್ವದಲ್ಲಿ ನಿರಾಸೆ ತಂದಿದೆ. ಮುಂದಿನ ಹೆಜ್ಜೆ ಸರಿಪಡಿಸಿಕೊಳ್ಳುವ ಚಿಂತನೆ ಈಗ ನಡೆದಿದೆ.

ಪಶ್ಚಿಮ ಬಂಗಾಳದ ಜಾಧವಪುರದಲ್ಲೂ ಎಡರಂಗ ಹೀನಾಯ ಸೋಲು ಕಂಡಿದೆ. ಈ ಕ್ಷೇತ್ರ 'ಪೂರ್ವದ ಲೆನಿನ್‌ಗ್ರಾಡ್' ಎಂದೇ ಹೆಸರಾಗಿತ್ತು. ಕಂಬಕ್ಕೆ ಎಡರಂಗದ ಚಿಹ್ನೆ ಕಟ್ಟಿ ಕಣಕ್ಕಿಳಿಸಿದರೂ ಜಾಧವಪುರದಲ್ಲಿ ಗೆಲುವು ಸಿಗುತ್ತದೆ ಎಂಬ ಕಾಲವೂ ಇತ್ತು. 1967ರಿಂದ ಒಂದು ಬಾರಿ ಬಿಟ್ಟರೆ ಸದಾ ಎಡರಂಗದ ಅಭ್ಯರ್ಥಿಗಳೇ ಗೆಲ್ಲುತ್ತಾ ಬಂದಿದ್ದಾರೆ. ಈ ಬಾರಿ ತೃಣಮೂಲ ಕಾಂಗ್ರೆಸ್ ಎದುರು ಪಕ್ಷ ಸೋತಿದೆ. ಸಿಪಿಐ (ಎಂ) ಹಿರಿಯ ನಾಯಕ ಸುಜನ್ ಚಕ್ರವರ್ತಿ ಅವರು ಮೊದಲ ಬಾರಿಯ ತೃಣಮೂಲ ಅಭ್ಯರ್ಥಿ ವಿರುದ್ಧ 40 ಸಾವಿರ ಮತಗಳ ಕಹಿ ಸೋಲುಂಡಿದ್ದಾರೆ.

ಈ ಚುನಾವಣೆ ತೃಣಮೂಲ ಕಾಂಗ್ರೆಸ್‌ಗೆ ಸೀಮಿತ ಜನಾದೇಶವಾಗಿದೆ. ಎಡ ಉದಾರವಾದಿ ಸೆಕ್ಯುಲರ್ ಮತದಾರರು ಬಿಜೆಪಿಗೆ ವಿರುದ್ಧವಾಗಿರುವ ಕಾರಣ ತೃಣಮೂಲಕ್ಕೆ ಬೆಂಬಲಿಸಿದ್ದಾರೆ. ಎಡರಂಗ ಸಂಘಟಿತವಾದರೆ ಮತ ಪಡೆದುಕೊಳ್ಳಲಿದೆ ಎಂದು ಬಸು ಹೇಳಿದ್ದಾರೆ. ಆದರೆ, ಎಡರಂಗ ಮತ್ತೆ ಮತಪಾಲು ಹೆಚ್ಚಿಸಿಕೊಳ್ಳುವುದು ಸುಲಭವಲ್ಲ ಎಂದು ಸ್ವತಂತ್ರ ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಎಡರಂಗ ಎದುರಿಸುತ್ತಿರುವ ಸಮಸ್ಯೆ ಆಳವಾಗಿದೆ. ಮತ ಗಳಿಕೆ ಕುಸಿದಿರುವುದು ಸಮಸ್ಯೆಯ ಸಂಕೇತ ಮಾತ್ರ ಎಂದು ಕಲ್ಕತ್ತಾ ರೀಸರ್ಚ್ ಗ್ರೂಪ್‌ನ ರಾಜಕೀಯ ವಿಶ್ಲೇಷಕ ರಜತ್ ರಾಯ್ ಹೇಳಿದ್ದಾರೆ.

ಕೇವಲ 17 ವರ್ಷಗಳ ಹಿಂದೆ ಎಡರಂಗ ದೇಶದಲ್ಲಿ ಮೂರನೇ ಅತಿ ದೊಡ್ಡ ಪಕ್ಷವಾಗಿತ್ತು. ಅದು 59 ಸಂಸದರನ್ನು ಹೊಂದಿತ್ತು. ಇವರಲ್ಲಿ 35 ಸಂಸದರು ಪಶ್ಚಿಮ ಬಂಗಾಳ ಒಂದರಿಂದಲೇ ಬಂದಿದ್ದರು. ಆನಂತರದಲ್ಲಿ ಎಡರಂಗದ ಪ್ರಾತಿನಿಧ್ಯ ಕುಸಿಯುತ್ತಾ ಸಾಗಿದೆ. ಪ್ರಸಕ್ತ ಪಶ್ಚಿಮ ಬಂಗಾಳದಿಂದ ಎಡರಂಗ ಯಾವುದೇ ಸಂಸದರನ್ನು ಹೊಂದಿಲ್ಲ.

1977ರಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಸಿದ್ಧಾರ್ಥ ಶಂಕರ್ ರಾಯ್ ಅವರು ನಕ್ಸಲರನ್ನು ಹತ್ತಿಕ್ಕಿದ್ದು, ಕೈಗಾರಿಕೆಗಳು ಸ್ಥಗಿತವಾಗಿದ್ದು ಹಾಗೂ ತುರ್ತು ಪರಿಸ್ಥಿತಿಯ ಅತಿರೇಕಗಳಲ್ಲಿ ತೊಡಗಿದ್ದು ಎಡರಂಗ ಅಧಿಕಾರಕ್ಕೆ ಬರಲು ಕಾರಣವಾಗಿತ್ತು. ನಂತರದಲ್ಲಿ ಎಡರಂಗ ಪಶ್ಚಿಮ ಬಂಗಾಳದಲ್ಲಿ ತಿರುಗಿ ನೋಡಿದ್ದೇ ಇಲ್ಲ.

ಆದರೆ, 2000ದ ವೇಳೆಗೆ ಮಮತಾ ಬ್ಯಾನರ್ಜಿ ಅವರು ರಾಜ್ಯದಲ್ಲಿ ಪ್ರಬಲರಾದರು. ನಂದಿಗ್ರಾಮದಲ್ಲಿ ರೈತರ ಜಮೀನು ವಶದ ವಿರುದ್ಧ ಅವರು ನಡೆಸಿದ ಹೋರಾಟ ಐತಿಹಾಸಿಕವಾಗಿತ್ತು. 2011ರ ವೇಳೆಗೆ ಅವರು ಎಡರಂಗ ಸರ್ಕಾರವನ್ನು ಪಶ್ಚಿಮ ಬಂಗಾಳದಲ್ಲಿ ಪದಚ್ಯುತಗೊಳಿಸಿದರು.

2021ರ ಚುನಾವಣೆಯಲ್ಲಿ ಮತದಾರರನ್ನು ಅರಿಯುವಲ್ಲಿ ಎಡರಂಗ ಸೋತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಅದರಲ್ಲೂ ಇಸ್ಲಾಮಿಕ್ ಧಾರ್ಮಿಕ ಮುಖಂಡ ಅಬ್ಬಾಸ್ ಸಿದ್ದಿಕ್ ನೇತೃತ್ವದ ಇಂಡಿಯನ್ ಸೆಕ್ಯುಲರ್ ಫ್ರಂಟ್ ಜೊತೆ ಎಡರಂಗ ಕೈ ಜೋಡಿಸಿದ್ದು ಪಕ್ಷಕ್ಕೆ ಮತ್ತಷ್ಟು ಹಿನ್ನಡೆ ತಂದಿದೆ.

ಎಡಪಕ್ಷಗಳು ಈಗ ಮರು ಹುಟ್ಟು ಪಡೆದುಕೊಳ್ಳಬೇಕಿದೆ ಹಾಗೂ ಜನ ಸಮೂಹದ ಸಂಪರ್ಕವನ್ನು ಹೆಚ್ಚಿಸಿಕೊಳ್ಳಬೇಕಿದೆ. ಯುವ ನಾಯಕರನ್ನು ಬೆಳೆಸಬೇಕಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

## ಅಲೆಮಾರಿ ಕುಟುಂಬಗಳಿಗೆ ಆಹಾರ ಕಿಟ್ ನೀಡಿದ ಡಿಸಿ



ದಾವಣಗೆರೆ, ಮೇ 9- ಲಾಕ್ ಡೌನ್ ಕಾರಣ ಹಸಿವಿನಿಂದ ಬಳಲುತ್ತಿರುವ ಅಲೆಮಾರಿ ಕುಟುಂಬಗಳು ಒಪ್ಪೊತ್ತಿನ ಊಟಕ್ಕೂ ಪರದಾಡುವಂತಾಗಿ ಜೀವನ ಸಂಕಷ್ಟಕ್ಕೆ ಸಿಲುಕಿದೆ.

ನಮಗೆ ದುಡ್ಡು ಬೇಕಾಗಿಲ್ಲ, ಮಕ್ಕಳು ಹಸಿವಿನಿಂದ ಬಳಲುವಂತಾಗಿದ್ದು, ಊಟದ ವ್ಯವಸ್ಥೆ ಮಾಡುವಂತೆ ಅಲೆಮಾರಿ ಕುಟುಂಬಗಳು ಜಿಲ್ಲಾಡಳಿತ, ತಾಲ್ಲೂಕು ಆಡಳಿತಕ್ಕೆ ನಗರದ ಪಿಬಿ ರಸ್ತೆಯ ಜಿಲ್ಲಾಡಳಿತ ಸಮೀಪದ ಕರೂರು ಬಳಿಯ ಅಲೆಮಾರಿ ಕುಟುಂಬ ಮನವಿ ಮಾಡಿದೆ.

100ಕ್ಕೂ ಹೆಚ್ಚು ಅಲೆಮಾರಿಗಳು, 50ಕ್ಕೂ ಹೆಚ್ಚು ಮಕ್ಕಳು ಇಲ್ಲಿ ತಾತ್ಕಾಲಿಕವಾಗಿ ಸೂರು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದು ಸೋಪು, ಸರ, ಬಳೆ ಸೇರಿದಂತೆ ಕೆಲ ಜನೋಪಯೋಗಿ ವಸ್ತುಗಳನ್ನು ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ. ಲಾಕ್‌ಡೌನ್‌ನಿಂದ ವ್ಯಾಪಾರ, ವಹಿವಾಟು ಇಲ್ಲದೇ ಕಳೆದ ಒಂದೂವರೆ ತಿಂಗಳಿನಿಂದ ಒಪ್ಪೊತ್ತಿನ ಊಟಕ್ಕೂ ಸಂಕಷ್ಟ ಪಡುವಂತಾಗಿದೆ.

ಕಳೆದ ಬಾರಿ ಕೂಡ ಆಹಾರವಿಲ್ಲದೆ ಈ ಅಲೆಮಾರಿಗಳು ಪರದಾಡುತ್ತಿದ್ದರು. ಈ ಬಾರಿ ಕೂಡ ಊಟವಿಲ್ಲದೆ ಚಿಕ್ಕ ಮಕ್ಕಳು ಪರದಾಡುವಂತಾಗಿದೆ.

ಕಳೆದ 20 ವರ್ಷಗಳಿಂದ ಇಲ್ಲಿ ಜೀವನ ಸಾಗಿಸುತ್ತಿದ್ದೇವೆ. 35 ಜೋಪಡಿಗಳಿವೆ. ನಮ್ಮ ಸಹಾಯಕ್ಕೆ ಯಾರೂ ಬರುತ್ತಿಲ್ಲ. ಲಾಕ್‌ಡೌನ್ ಆದ ಮೇಲೆ ನಮ್ಮ ಬದುಕು ಮತ್ತಷ್ಟು ದುಸ್ಥರವಾಗಲಿದೆ. ನಮಗೆ ಊಟದ ವ್ಯವಸ್ಥೆ ಕಲ್ಪಿಸಿ ಎಂದು ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್ ಅವರಿಗೆ ಮನವಿ ಮಾಡಿದರು.

**ಸಂಕಷ್ಟಕ್ಕೆ ನೆರವಾದ ಡಿಸಿ:** ಸಂಜೆ ಸ್ಥಳಕ್ಕೆ ತಮ್ಮ ತಂಡದೊಂದಿಗೆ ತೆರಳಿದ ಜಿಲ್ಲಾಧಿಕಾರಿ ಬೀಳಗಿ ಅವರು, ಅಲ್ಲಿನ ಅಲೆಮಾರಿ ಕುಟುಂಬ ಗಳ ಸ್ಥಿತಿಗತಿ ಅವಲೋಕಿಸಿದರು. ಎಲ್ಲಾ 35 ಕುಟುಂಬಗಳಿಗೆ ಆಹಾರ ಸಾಮಗ್ರಿ ಕಿಟ್‌ಗಳನ್ನು ವಿತರಿಸಿದರು. ಇದು ಖಾಲಿಯಾದಲ್ಲಿ ತಿಳಿಸಿದರೆ ಪುನಃ ಕಿಟ್ ಕೊಡುವುದಾಗಿ ಭರವಸೆ ನೀಡಿದ್ದಾರೆ.

# ಹಣ, ಅಧಿಕಾರಕ್ಕೆ ಆಸೆ ಪಡದೇ ಸಿದ್ಧಾಂತ ಬದುಕು ನಡೆಸಿದ ಹೆಚ್.ಕೆ.ಆರ್

### ಜಿಲ್ಲಾ ಕಾಂಗ್ರೆಸ್‌ನಿಂದ ಶ್ರದ್ಧಾಂಜಲಿಯಲ್ಲಿ ದಿನೇಶ್ ಕೆ.ಶೆಟ್ಟಿ ಶ್ಲಾಘನೆ



ದಾವಣಗೆರೆ,ಮೇ 9- ನಿನ್ನೆ ನಿಧನರಾದ ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಅವರಿಗೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಏರ್ಪಾಡಾಗಿದ್ದ ಸಭೆಯಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಹಣ, ಅಧಿಕಾರಕ್ಕೆ ಎಂದಿಗೂ ತಾವು ನಂಬಿದ ಸಿದ್ಧಾಂತವನ್ನು ಬಲಿ ನೀಡದೇ ತಮ್ಮ ಜೀವನದ ಕೊನೆಯವರೆಗೂ ಹೋರಾಟದ ಬದುಕು ನಡೆಸಿದ್ದರು ಎಂದು ಸ್ಮರಿಸಿದರು.

ಹೆಚ್ಕೆಆರ್ ಅವರ ಹೋರಾಟದ ಬದುಕಿನಲ್ಲಿ ಅವರಿಗೆ ಅನೇಕ ಆಸೆ-ಆಮಿಷಗಳನ್ನು ಒಡ್ಡುತ್ತಿದ್ದರೂ ಸಹ ಎಂದಿಗೂ ಸಹ ಆಸೆ-ಆಮಿಷಗಳಿಗೆ ಬಲಿಯಾಗದೇ ನೇರ ನಡೆ-ನುಡಿಯ ಮೂಲಕ ಶ್ರಮಿಕರು, ಶೋಷಿತರ ಪರವಾಗಿ ಹೋರಾಟ ನಡೆಸಿದ್ದರು ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿ, ಹೋರಾಟದ ಮೂಲಕ ಅಧಿಕಾರಕ್ಕೆ ಬಂದ ಹೆಚ್‌ಕೆಆರ್ ಅವರು ಅಧಿಕಾರ ಮುಗಿದ ನಂತರ ಮನೆಯಲ್ಲಿ ಕುಳಿತುಕೊಳ್ಳದೇ ಈ ಸಮಾಜಕ್ಕೆ ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದರು ಎಂದರು.

ನಗರಸಭೆ ಅಧ್ಯಕ್ಷರಾದ ಹೆಚ್ಕೆಆರ್ ಅವರು ಪಂಪಾಪತಿಯವರಂತೆ ದಾವಣಗೆರೆ ಹಸಿರೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದರು. ಅಧಿಕಾರದ ಗದ್ದುಗೆ ಮುಳ್ಳಿನ ಹಾಸಿಗೆ ಇದ್ದಂತೆ ಅದನ್ನು ಹೂವಿನ ಹಾಸಿಗೆ ಮಾಡಿಕೊಳ್ಳುವ ಜವಾಬ್ದಾರಿ ಅಧಿಕಾರ ನಡೆಸುವವರ ಬಳಿ ಇರಲಿದೆ ಎಂದು ಹೇಳುತ್ತಿದ್ದರೂ ಎಂದು ತಮ್ಮ ಹಿಂದಿನ ದಿನಗಳನ್ನು ಅವರು ನೆನಪಿಸಿಕೊಂಡರು.

ಈ ಸಂದರ್ಭದಲ್ಲಿ ದೂಡಾ ಮಾಜಿ ಅಧ್ಯಕ್ಷ ಅಯೂಬ್ ಪೈಲ್ವಾನ್, ಲಿಯಾಖತ್ ಅಲಿ, ಶ್ರೀಕಾಂತ್ ಬಗರೆ, ಯುವರಾಜ್, ಮಹ್ಮದ್ ಜಿಕ್ರಿಯಾ, ಸುರೇಶ್ ಜಾಧವ್, ರಿಯಾಜುದ್ದೀನ್, ಹರೀಶ್, ಫಯಾಜ್ ಅಹ್ಮದ್, ಮೆಹಬೂಬ್ ಬಾಷಾ ಮತ್ತಿತರರಿದ್ದರು.

## ಪಾದಯಾತ್ರೆ ಮುಖೇನ ಚನ್ನಗಿರಿ ಶ್ರೀಗಳ ಕೊರೊನಾ ಜಾಗೃತಿ



ದಾವಣಗೆರೆ, ಮೇ 9- ಚನ್ನಗಿರಿ ಶ್ರೀ ಕೇದಾರ ಲಿಂಗೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಖಡ್ಗ ಸಂಘಟನೆಯಿಂದ ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರಿನಲ್ಲಿ ಇಂದು ಕೊರೊನಾ ಜಾಗೃತಿ ಅಭಿಯಾನ ನಡೆಸಲಾಯಿತು. ಪಾದಯಾತ್ರೆ ಮೂಲಕ ಶ್ರೀಗಳು ಜನರಲ್ಲಿ ಜಾಗೃತಿ ಮೂಡಿಸಿದರು.

ಮಾಸ್ಕ್ ಹಾಕಿ ಸರ್ಕಾರದ ನಿರ್ದೇಶನ ಪಾಲನೆ ಮಾಡುವಂತೆ ಹಾಗೂ ಕೊರೊನಾವನ್ನು ನಿಯಂತ್ರಣ ಮಾಡಲು ಸಹಕರಿಸಿ ಎಂದು ಜನರಲ್ಲಿ ಮನವಿ ಮಾಡಿದರು.

ಸಂತೇಬೆನ್ನೂರು ಪೊಲೀಸರು ಸೇರಿದಂತೆ ಖಡ್ಗ ಸಂಘಟನೆಯ ಕಾರ್ಯಕರ್ತರು ಭಾಗವಹಿಸಿದ್ದರು.

## ಸಮಾಜಕ್ಕೆ ಸಲ್ಲಿಸಿದ ಹೆಚ್ಕೆಆರ್ ಸೇವೆ ಅನನ್ಯ



**ಬಿ. ವೀರಣ್ಣ**

ದಾವಣಗೆರೆ, ಮೇ 9- ನಾಯಕ ಸಮಾಜದ ಹಿರಿಯ ಮುಖಂಡರು, ಕಾರ್ಮಿಕ ಮುಖಂಡರೂ ಆದ ಹೆಚ್.ಕೆ. ರಾಮಚಂದ್ರಪ್ಪ ಅವರ ನಿಧನಕ್ಕೆ ನಗರದ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಇಂದು ನಡೆದ ಸಭೆಯಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ.ವೀರಣ್ಣ, ಹೆಚ್.ಕೆ. ರಾಮಚಂದ್ರಪ್ಪ ಅವರು ನಾಯಕ ಸಮಾಜದ ಅಧ್ಯಕ್ಷರಾಗಿ, ನಗರಸಭೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರಲ್ಲದೇ, ಕಾರ್ಮಿಕ ಚಳುವಳಿ ಮೂಲಕ ಬಡವರ ಪರ ಧ್ವನಿಯಾಗಿದ್ದರು ಎಂದು ಸ್ಮರಿಸಿದರು.

ನಾಯಕ ವಿದ್ಯಾರ್ಥಿ ನಿಲಯದ ನಿರ್ದೇಶಕರಾದ ಫಣಿಯಾಪುರ ಲಿಂಗರಾಜ್, ಶ್ಯಾಗಲೆ ಮಂಜುನಾಥ, ಮುಖಂಡರಾದ ಬೆಣ್ಣೆಹಳ್ಳಿ ತಿಪ್ಪೇಸ್ವಾಮಿ, ತಿಮ್ಮಯ್ಯ, ಚೇತನ್ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ರೆಡ್ ಕ್ರಾಸ್ ಸಂಸ್ಥಾಪಕರ ದಿನಾಚರಣೆ: ಔಷಧಿ ವಿತರಣೆ



ದಾವಣಗೆರೆ, ಮೇ 9- ವಿಶ್ವ ರೆಡ್ ಕ್ರಾಸ್ ದಿನಾಚರಣೆ ಅಂಗವಾಗಿ ರೆಡ್‌ಕ್ರಾಸ್ ಸಂಸ್ಥಾಪಕ ಜೀನ್ ಹೆನ್ರಿ ಡುನಾಂಟ್ ಜನ್ಮ ದಿನಾಚರಣೆಯನ್ನು ನಗರ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯಿಂದ ಇಲ್ಲಿನ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿರುವ ಕೋವಿಡ್ ರೋಗಿಗಳಿಗೆ ಅವಶ್ಯವಿರುವ ಸುಮಾರು 1 ಲಕ್ಷ ರೂ. ಮೊತ್ತದ ಔಷಧಿ ಮಾತ್ರೆಗಳನ್ನು ನೀಡುವ ಮೂಲಕ ಆಚರಿಸಲಾಯಿತು.

ಜಿಲ್ಲಾಸ್ಪತ್ರೆಯ ಕ್ವಾರ್ಟಸ್‌ನಲ್ಲಿರುವ ವೈದ್ಯರಿಗೆ 30 ಸಾವಿರ ರೂ. ಮೊತ್ತದ ದಿನಬಳಕೆಗೆ ಬೇಕಾದ ಬಕೆಟ್, ಮಗ್, ಪಿಲ್ಲೋ ಕವರ್, ಸೊಳ್ಳೆ ಓಡಿಸಲು ಆಲ್‌ಔಟ್‌ಗಳನ್ನು ಆಸ್ಪತ್ರೆ ಮುಖ್ಯಸ್ಥರಿಗೆ ನೀಡಲಾಯಿತು ಎಂದು ಸಂಸ್ಥೆ ಚೇರ್ಮನ್ ಡಾ.ಎ.ಎಂ. ಶಿವಕುಮಾರ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಂಸ್ಥೆ ಕಾರ್ಯದರ್ಶಿ ಡಿ.ಎಸ್. ಸಾಗರ್, ಗೌರವ ಕಾರ್ಯದರ್ಶಿ ಸಿ.ಎ. ಉಮೇಶ ಶೆಟ್ಟಿ, ಖಜಾಂಚಿ ಅನಿಲ್ ಬಾರೆಂಗಳ್ ಮತ್ತಿತರರು ಉಪಸ್ಥಿತರಿದ್ದರು.

# ರಾಮಚಂದ್ರಪ್ಪ ಸಮುದಾಯಕ್ಕೆ ದುಡಿದಿದ್ದು ನಾಯಕರಿಗೆ ಮಾದರಿ

**ಮಾಜಿ ಸಚಿವ ಆಂಜನೇಯ ಸಂತಾಪ**

ಬೆಂಗಳೂರು, ಏ 9 - ಕಾರ್ಮಿಕ ಮುಖಂಡ ಹೆಚ್.ಕೆ.ರಾಮಚಂದ್ರಪ್ಪ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಮಾಜಿ ಸಚಿವ ಹೆಚ್. ಆಂಜನೇಯ, ಶೋಷಣೆಯ ವಿರುದ್ಧ ಕೊನೆಯ ಉಸಿರಿನ ತನಕ ಅಹರ್ನಿಶಿ ಹೋರಾಟ ನಡೆಸಿದ ಅವರ ಹಠಾತ್ ಅಗಲಿಕೆ ಸೃಷ್ಟಿಸಿರುವ ಶೂನ್ಯ ಅಗಾಧವಾದುದು ಎಂದಿದ್ದಾರೆ.

ಹೆಚ್.ಕೆ.ಆರ್. ಎಂದೇ ಜನಜನಿತವಾಗಿರುವ ರಾಮಚಂದ್ರಪ್ಪ, ಕಾರ್ಮಿಕರ ಏಳಿಗೆಗಾಗಿ ಕಳೆದ ಐದು ದಶಕಗಳಲ್ಲಿ ನಡೆಸಿದ ಹೋರಾಟದ ಪ್ರತಿಫಲವಾಗಿ ಶ್ರಮಜೀವಿಗಳ ಬದುಕಿನಲ್ಲಿ ಮೂಡಿಸಿದ ಭರವಸೆಯ ಬೆಳಕು ಅಸದೃಶವಾದುದು. ವೈಯಕ್ತಿಕ ಆಶಯಗಳನ್ನೂ ಮರೆತು ಸಮುದಾಯದ ಔನ್ನತ್ಯಕ್ಕೆ ದುಡಿವ ಪರಿ ಎಲ್ಲ ನಾಯಕರುಗಳಿಗೂ ಒಂದು ಮಾದರಿ ಎಂದು ಆಂಜನೇಯ ತಿಳಿಸಿದ್ದಾರೆ.

ನಾನು ದಾವಣಗೆರೆ ಪೌರ ಕಾರ್ಮಿಕರ ಪರವಾಗಿ ಅಂದಿನ ಪಂಪಾಪತಿಯವರ ಅಧ್ಯಕ್ಷತೆಯ ನಗರಸಭೆಯ ವಿರುದ್ದವೇ ಧರಣಿ ಹೂಡಿದಾಗ ಬೇಡಿಕೆ ಈಡೇರಿಸಲು ಹೆಚ್.ಕೆ.ಆರ್.ಕೂಡಾ ಕಾರಣರಾಗಿದ್ದರು. ಮುಂದೆ ನಾವೆಲ್ಲಾ ನಗರಸಭೆಯ ಸದಸ್ಯರಾದಾಗ ಹೆಚ್.ಕೆ.ಆರ್. ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಬಾರದೆಂಬ ರಾಜಕೀಯ ಕಾರಣಕ್ಕಾಗಿ ನಾನು ಅವರ ವಿರುದ್ದವಾಗಿ ಸ್ಪರ್ಧೆ ಮಾಡಿದರೂ ಸಹಾ ಕ್ರೀಡಾ ಮನೋಭಾವದಿಂದ ಸ್ವೀಕರಿಸಿ ಎಂದಿನ ವೈಯಕ್ತಿಕ ವಿಶ್ವಾಸವನ್ನೇ ತೋರಿದ ಸ್ನೇಹಮಯಿ ಎಂದವರು ನೆನಪಿಸಿಕೊಂಡಿದ್ದಾರೆ.

ರಾಜ್ಯದ ಎಲ್ಲೇ ಶೋಷಣೆ ನಡೆದರೂ ಅಲ್ಲಿ ರಾಮಚಂದ್ರಪ್ಪನವರ ಹೋರಾಟದ ಕಹಳೆ ಮೊಳಗುತ್ತಿತ್ತು. ಎಪ್ಪತ್ತೆಂಟರ ಈ ವಯಸ್ಸಿನಲ್ಲಿಯೂ ಚೈತನ್ಯಶೀಲರಾಗಿ, ಮನೆಯ ಚಿಂತೆಯನ್ನೂ ಮರೆತು ದಮನಿತರ ಅಳಲನ್ನಾಲಿಸಲು, ನೊಂದ ಜೀವಿಗಳಿಗೆ ಭದ್ರತೆ ಕಲ್ಪಿಸಲು ಶ್ರಮಿಸುತ್ತಿದ್ದ ಹೆಚ್ ಕೆ ಆರ್. ಈ ನಾಡು ಕಂಡ ಅಸಾಮಾನ್ಯ ಹೋರಾಟಗಾರ ಎಂದು ಆಂಜನೇಯ ಬಣ್ಣಿಸಿದ್ದಾರೆ.

## ನೀಲಗುಂದದ ಶ್ರೀ ಚೆನ್ನಬಸವ ಶಿವಯೋಗಿಗಳ ಸಂತಾಪ

ಹರಪನಹಳ್ಳಿ, ಮೇ 9- ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ನಿಧನಕ್ಕೆ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ನೀಲಗುಂದ ಗುಡ್ಡದ ವಿರಕ್ತಮಠದ ಶ್ರೀ ಚೆನ್ನಬಸವ ಶಿವಯೋಗಿಗಳು ಸಂತಾಪ ವ್ಯಕ್ತ ಪಡಿಸಿದ್ದಾರೆ.

ಕೆಪಿಸಿಸಿ ಮಹಿಳಾ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ ಚರಂತಿ ಮಠ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಪುರಸಭೆ ಮಾಜಿ ಅಧ್ಯಕ್ಷ ಎಚ್. ಕೆ. ಹಾಲೇಶ್, ಪುರಸಭೆ ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ, ಶಿಕ್ಷಕ ಸಂಗಪ್ಪನವರ ಬಸವರಾಜ್, ಮುಖಂಡ ಕೋಡಿಹಳ್ಳಿ ಭೀಮಪ್ಪ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ರಾಮನಮಲಿ, ಪುರಸಭೆ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಟಿ.ವೆಂಕಟೇಶ್, ಗೊಂಗಡಿ ರಾಜಣ್ಣ, ವಿವಿಧ ಸಂಘಟನೆಯ ಮುಖಂಡರಾದ ಹೊಸಹಳ್ಳಿ ಮಲ್ಲೇಶ್, ಎಚ್.ಎಂ. ಸಂತೋಷ್, ಗುಡಿಹಳ್ಳಿ ಹಾಲೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರುಗಳಾದ ಎಚ್.ರಾಜಪ್ಪ, ಕಿತ್ತೂರು ಓಬಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಕಂಚಿಕೇರಿ ಜಯಲಕ್ಷ್ಮಿ ಮತ್ತಿತರರು ತೀವ್ರ ಶೋಕ ವ್ಯಕ್ತ ಪಡಿಸಿದ್ದಾರೆ.

# ಹೋಗಿ ಬನ್ನಿ ಕಾಮ್ರೆಡ್ ನಿಮಗೊಂದು ಲಾಲ್ ಸಲಾಂ



ಅದೇನು ಕಾಮ್ರೆಡ್ ಇಷ್ಟು ಜಲ್ದಿ ಹೋಗಿಬಿಟ್ರಿ. ಜವರಾಯನಿಗೆ ಅಷ್ಟೊಂದು ಜರೂರತ್ತು ಏನಿತ್ತೋ, ನಿಮ್ಮನ್ನು ಅಷ್ಟು ಬೇಗ ಕರೆದುಕೊಂಡು ಹೋಗಲು? ಹೊಂಚುಹಾಕಿ ಕುಳಿತಿದ್ದ ಅಂತ ಕಾಣುತ್ತೆ, ಎಂತೆಂತದ್ದೋ ಹೋರಾಟಗಳಲ್ಲಿ ಪ್ರಾಣ ಭಯ ಲೆಕ್ಕಿಸದೆ ಸೆಣಸಾಡಿದ ನಿಮ್ಮನ್ನು ಕರೆದೊಯ್ಯಲು 'ಕೊರೊನಾ' ಮಹಾಮಾರಿಯ ನೆಪವೊಂದು ಬೇಕಾಯ್ತಾ ಆ ಹೃದಯ ಹೀನ ಜವರಾಯನಿಗೆ.

1978 ರ ಆ ದಿನಗಳು ಇನ್ನೂ ನೆನಪಿವೆ. ನಾನು, ಗೆಳೆಯರು ನಗರಸಭೆಯಲ್ಲಿ ಇದ್ದ ದಿನಗೂಲಿ ಕೆಲಸ ಉಳಿಸಿಕೊಳ್ಳಲು ದಿಕ್ಕೇ ತೋಚದ ಸಂದರ್ಭದಲ್ಲಿ ನಮಗೆಲ್ಲಾ ಆಶಾಕಿರಣವೊಂದು ಕಂಡದ್ದು ಕೆಂಬಾವುಟದಲ್ಲಿ! ಆಗೆಲ್ಲಾ ಕೆಂಬಾವುಟವೆಂದರೆ ಹಸಿದವರ, ನೋವುಂಡವರ, ಶ್ರಮಿಕರ ಪಾಲಿನ ವಿಜಯ ಪತಾಕೆ. ದುಡಿಯುವ ವರ್ಗದ ಪ್ರಾಣವಾಯು. ಹಾಗಾಗಿ ನಾವು ದಿನಗೂಲಿ ನೌಕರರು ಕಮ್ಯುನಿಸ್ಟ್ ಪಕ್ಷದ ಕಛೇರಿಗೆ ಎಡತಾಕಿದೆವು. ಆಗತಾನೆ ನೀವು ಒಂದು ತಂಡವಾಗಿ ಬೆಂಗಳೂರು ಜೈಲಿನಿಂದ ಬಿಡುಗಡೆಯಾಗಿ ಹೊರ ಬಂದಿದ್ದಿರಿ. ಆಗ ಕಮ್ಯುನಿಸ್ಟ್ ಪಕ್ಷ ನಮಗೆಲ್ಲಾ ನಾಯಕತ್ವ ನೀಡಲು ನಿಮ್ಮನ್ನು ಸೂಚಿಸಿತು. ನೀವೂ ಸಹ ಹಿಂದುಮುಂದು ನೋಡದೆ ಒಪ್ಪಿಗೆ ಸೂಚಿಸಿದ್ದು ಕಣ್ಣಿಗೆ ಕಟ್ಟಿದಂತಿದೆ.

ಅಲ್ಲಿಂದ ನೀವು ಹಿಂತಿರುಗಿ ನೋಡಲಿಲ್ಲ. ಜೈಲಿನಿಂದ ಹೊರಬಂದು ಏನು ಮಾಡಬೇಕೆಂದು ಯೋಚಿಸುತ್ತಿರುವಾಗಲೇ, ನಿಮ್ಮ ಕೈಗೆ ಮೊದಲ ಸಂಘಟನೆಯ ಜವಾಬ್ದಾರಿಯೊಂದು ಸಿಕ್ಕಿತು. ನಿಮ್ಮ ಜೈಲುವಾಸ ನಿಮಗೊಂದು ಪ್ರಶಂಸಾ ಪತ್ರವಾಯಿತು. ಏಕೆಂದರೆ ಆಗಿನ ವಾತಾವರಣವೇ ಹಾಗಿತ್ತು. ನೀವು ದುಡಿಯುವ ಜನರ ಪರವಾಗಿ, ಮಾಲೀಕರ ಕುತಂತ್ರದಿಂದ ಜೈಲಿಗೆ ಹೋದವರು. ಆಗ ನಾವೆಲ್ಲಾ ಯುವಕರು. ಸಿನಿಮಾ, ಹಾಡು, ಕುಣಿತದ ಗುಂಗಿನಲ್ಲಿದ್ದವರು. ರಾಜಕಾರಣವೆಂದರೆ ನಮಗೆಲ್ಲಾ ತುರ್ತು ಪರಿಸ್ಥಿತಿ, ಪ್ರಜಾಪ್ರಭುತ್ವ ಮುಂತಾದ ಪದಗಳನ್ನು ಬಿಟ್ಟರೆ ಮತ್ತೇನೂ ಗೊತ್ತಿರಲಿಲ್ಲ. ಇನ್ನು ಕಮ್ಯುನಿಸ್ಟ್ ಎಂದರೆ ಕೇವಲ ಕಾರ್ಮಿಕರಿಗಾಗಿ ಇರುವ ಒಂದು ಪಕ್ಷ ಅಂತ ಮಾತ್ರ ಗೊತ್ತಿತ್ತು. ಯಾವಾಗ ನಿಮ್ಮ ಸಹವಾಸಕ್ಕೆ ಬಿದ್ದೆವೋ ಹೊಸ ಲೋಕವೊಂದರ ಅನಾವರಣವಾಯಿತು. ಅದು ದುಡಿಯುವ ವರ್ಗದ ಜಗತ್ತು, ಮಾನವತಾ ವಾದದ ಜಗತ್ತು, ಸಮಾನತೆಯ ಜಗತ್ತು ಕಣ್ಣ ಮುಂದೆ ಬಂದು ಅದರ ಕನಸುಗಾರರಾಗತೊಡಗಿದೆವು! ಇದರ ಪರಿಣಾಮ ನನ್ನಂತವರ ಜೀವನದ ದಿಕ್ಕು, ಯೋಚಿಸುವ ಪರಿಯೇ ಬದಲಾಯಿತು.

ಇವತ್ತಿನ ದಾವಣಗೆರೆಯ ಸ್ಲಮ್‌ಗಳು (ಕೊಳಚೆ ಪ್ರದೇಶಗಳು) ಬೆಳಕು ಕಂಡಿದ್ದರೆ, ಕುಡಿಯುವ ನೀರು ಅಲ್ಲಿನ ಮನೆಗಳ ಬಾಗಿಲುಗಳ ಬಳಿಯೇ ಬಂದಿದ್ದರೆ ಮತ್ತು ಆ ಪ್ರದೇಶಗಳು ಚರಂಡಿ, ಒಳಚರಂಡಿ ಕಂಡಿದ್ದರೆ ಅದು ನೀವು ಅಂದು ಅಲ್ಲಿನ ಜನರನ್ನು ಸಂಘಟಿಸಿದ್ದರ ಫಲ. ದಾವಣಗೆರೆ (ಅವಿಭಜಿತ ಚಿತ್ರದುರ್ಗ ಜಿಲ್ಲೆ) ಯಲ್ಲಿ ಕೊಳಚೆ ಪ್ರದೇಶಗಳ ನಿವಾಸಿಗಳ ಸಮ್ಮೇಳನ ನಡೆಸಿ, ಅಲ್ಲಿಯ ನಾಗರಿಕರಿಗೆ ಇತರೆ ನಾಗರಿಕರಂತೆ ಬದುಕುವ ಹಕ್ಕನ್ನು ಕಲ್ಪಿಸಿದ ಕಾರಣಕ್ಕೆ, ಅವರನ್ನು ಜಾಗೃತಗೊಳಿಸಿ ಅವರನ್ನು ಹೋರಾಟದ ಕಣಕ್ಕೆ ಇಳಿಸಿದ ಪರಿಣಾಮ ಎಂಬುದನ್ನು ಮರೆಯಲಾಗದು. ಅಲ್ಲಿ ವಾಸಿಸುವ ಈಗಿನ ತಲೆಮಾರು ಅದನ್ನು ಮರೆತಿರಬಹುದು, ನಾವುಗಳು ಮರೆಯಲಾದೀತೆ.

ನಗರದ ಫುಟ್‌ಪಾತ್ ವ್ಯಾಪಾರಿಗಳು ಪೊಲೀಸರ, ನಗರಸಭೆ ಅಧಿಕಾರಿಗಳಿಂದ ಪದೇಪದೇ ಕಿರುಕುಳಕ್ಕೊಳಪಟ್ಟಾಗ ಅವರನ್ನೂ ಸಂಘಟಿಸಿ ಅವರಿಗೂ ಬದುಕುವ ಹಕ್ಕು ಇದೆಯೆಂಬುದನ್ನು ತೋರಿಸಿಕೊಟ್ಟವರು ನೀವು ತಾನೇ. ಅಂಗನವಾಡಿ ಹೆಣ್ಣುಮಕ್ಕಳು ಸರ್ಕಾರದ ಜೀತದಾಳುಗಳಂತೆ ಬದುಕುತ್ತಿದ್ದಾಗ ಅವರಿಗೂ ಸ್ವಾಭಿಮಾನ ಕಲಿಸಿ, ಸಂಘಟಿಸಿ, ಅವರನ್ನೂ ಬೀದಿಗಿಳಿಸಿ ಸ್ವಾಭಿಮಾನದ ಹೋರಾಟವನ್ನು ಕಲಿಸಿದ್ದು ನೀವಲ್ಲವೇ. ಕೊಳಚೆ ಪ್ರದೇಶಗಳ ಮಕ್ಕಳಿಗೂ ಶಿಶುವಿಹಾರದ ಶಿಕ್ಷಣವನ್ನು ಪ್ರಾರಂಭಿಸಿದ್ದೂ, ಅಲ್ಲಿಯ ಮಕ್ಕಳು ವಿದ್ಯಾವಂತರಾಗಲು ಕಾರಣರಾದದ್ದು ನೀವೇ ತಾನೆ.

ಹೀಗೆ ಒಂದೊಂದೇ ಸಂಘಟನೆಗಳನ್ನು ಕಟ್ಟುತ್ತಾ, ಪಂಪಾಪತಿಯವರ ನಂತರ ಯಾರು? ಎಂಬ ಪ್ರಶ್ನೆಗೆ ತಮ್ಮ ಎಡಬಿಡದ ಚಟುವಟಿಕೆಗಳು, ಹೋರಾಟಗಳು, ಕಟ್ಟಿದ ಹೊಸ ಸಂಘಟನೆಗಳ ಮೂಲಕ ಆ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಸಾಧಿಸಿದಿರಿ. ನೀವು ಪಕ್ಷದಲ್ಲಿ ಹೊಸ ಹೊಸ ಪ್ರಯತ್ನಗಳಿಗೆ ಕೈ ಹಾಕಿದ ಪರಿಣಾಮ, ಪಕ್ಷದಲ್ಲಿನ ನಿಮ್ಮ ವಿರೋಧಿಗಳೂ ಬೆರಳು ಕಚ್ಚಿಕೊಳ್ಳುವಂತೆ ಮಾಡಿದ್ದು ಸುಳ್ಳಲ್ಲ. ಉದಾ: 1981ರ ಸುಮಾರಿಗೆ ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ರಾಜ್ಯ ಮಟ್ಟದ ಗುಡ್ಡಗಾಡು ಓಟದ ಸ್ಪರ್ಧೆಯನ್ನು ತಮ್ಮ ಸ್ವಸಾಮರ್ಥ್ಯದ ಮೇಲೆ ಯಶಸ್ವಿಯಾಗಿ ನಡೆಸಿ, ಎಲ್ಲರೂ ಹುಬ್ಬೇರಿಸುವಂತೆ ಮಾಡಿಬಿಟ್ಟದ್ದು ಸುಳ್ಳಲ್ಲ. ಇದೆಲ್ಲದರ ನಡುವೆ ರಾಜಕಾರಣದಲ್ಲಿ ಸಕ್ರಿಯವಾಗಿರುವ ತಮ್ಮ ವಾಂಛೆಯನ್ನು ಈಡೇರಿಸಿ ಕೊಳ್ಳುವಲ್ಲೂ ನೀವು ಹಗಲು, ರಾತ್ರಿ ಸಕ್ರಿಯರಾದಿರಿ. ಅದರ ಫಲ ಮೂರು ಬಾರಿ ನಗರಸಭೆಯ ಸದಸ್ಯರಾಗಿ, ಒಮ್ಮೆ ನಗರಸಭೆಯ ಅಧ್ಯಕ್ಷರೂ ಆಗಿಬಿಟ್ಟಿರಿ. ಆದರೆ ಆ ಸ್ಥಾನದ ಮುಂದಿನ (ಶಾಸಕ) ಕನಸು ಮಾತ್ರ ಈಡೇರದೆ ಸೋತು ಹೋದಿರಿ, ಏಕೆಂದರೆ ಅಲ್ಲಿತನಕ ತಮ್ಮ ಕೈಗಳನ್ನು ಚಾಚುವಷ್ಟು ಬೆಳೆದಿರಲಿಲ್ಲವೆಂಬುದೂ ಸತ್ಯ!

ಈ ನಗರ ಕಂಡ ಮಹಾನ್ ನಾಯಕ ಕಾಂ. ಪಂಪಾಪತಿಯವರು ಅಗಲಿ ಹೋದ ನಂತರ, ಅವರ ನಂತರ ಯಾರು ಎಂಬ ಪ್ರಶ್ನೆಯೇ ಏಳದಂತೆ ಆಸ್ಥಾನವನ್ನು ತುಂಬಿ, ಅವರು ಬಿಟ್ಟುಹೋಗಿದ್ದ ಶೂನ್ಯವನ್ನು ತುಂಬಿ, ಪಕ್ಷ ಬೆಳಗಿದ ಬೆಳಕನ್ನು ವಿಸ್ತರಿಸಲು ಆಗದಿದ್ದರೂ ಅದು ಆರದಂತೆ ಕಾಪಾಡಿದ್ದು ಕಡಿಮೆ ಸಾಧನೆ ಏನಲ್ಲ. ಅದಕ್ಕಾಗಿ ಈ ಇಳಿವಯಸ್ಸಿನಲ್ಲೂ ಹಗಲು, ರಾತ್ರಿ ಒಂದು ಮಾಡಿ ದುಡಿದಿರಿ. ನೀವು ಕಂಡ ಸಮಾಜವಾದದ ಗುರಿಯ ಪಯಣ ಬಹಳ ದೂರದ್ದು ಎಂದು ಗೊತ್ತಿದ್ದರೂ ಅದರತ್ತ ಹೆಜ್ಜೆ ಹಾಕುವುದನ್ನು ಮಾತ್ರ ಬಿಡಲಿಲ್ಲ ಮತ್ತು ಇತರರೂ ಹೆಜ್ಜೆ ಇಡಲಿ ಎಂದು ಬಯಸಿದರೂ ಸಾಧ್ಯವಾಗದಾಯಿತು.

ಕಾಮ್ರೆಡ್, ನಿಮ್ಮ ಬದುಕಿನುದ್ದದ ಹೋರಾಟದ ಪಯಣದಲ್ಲಿ ಜೊತೆಗಿದ್ದವರು ನೂರಾರು ಮಂದಿ, ಈ ಪಯಣದ ಹಾದಿಯಲ್ಲಿ ಒಬ್ಬೊಬ್ಬರಾಗಿ ನಿಮ್ಮೆದುರೇ ಕಾಲನ ಹಾದಿ ಹಿಡಿದರೂ, ನೀವು ಒಬ್ಬಂಟಿಗರಾಗಿ ಉಳಿದಂತೆ ಕಂಡಿರಿ. ಉಳಿದ ನೀವಾದರೂ ಇಂದಲ್ಲಾ ನಾಳೆ ದಡ ಮುಟ್ಟಿಸಬಲ್ಲಿರಿ, ಸಹಸ್ರಾರು ದುಡಿಯುವ ಜನರ ಕನಸನ್ನು ಹೀಗೆ ಅನಿರೀಕ್ಷಿತವಾಗಿ ಜವರಾಯನ ಬಲೆಗೆ ಬಿದ್ದು ಭಗ್ನಗೊಳಿಸಿ ಬಿಟ್ಟಿರಿ. ಆಯಿತು, ನೀವು ಹೋಗಿರುವುದು ಮರಳಿ ಬಾರದ ಲೋಕವೆಂಬುದು ಗೊತ್ತಿರುವುದರಿಂದ ನಿಮಗೆ ಅಂತಿಮ ವಿದಾಯ ಹೇಳದೆ ಬೇರೆ ವಿಧಿಯೇ ಇಲ್ಲ. ಹೋಗಿ ಬನ್ನಿ ಕಾಮ್ರೆಡ್ ನಿಮಗೊಂದು ಲಾಲ್ ಸಲಾಂ.

- ಇಮ್ತಿಯಾಜ್ ಹುಸೇನ್
ದಾವಣಗೆರೆ

# ಕೊರೊನಾ ಸೋಂಕಿತರು, ಬಡವರಿಗೆ ಉಚಿತ ಊಟದ ವ್ಯವಸ್ಥೆ ಪುಣ್ಯದ ಕೆಲಸ



**ತರಳಬಾಳು ಸೇವಾ ಸಮಿತಿ, ಶಿವಸೈನ್ಯ ಯುವಕರ ಸಂಘ ಹಾಗೂ ದಾನಿಗಳ ಸೇವೆಗೆ ಸಂಸದ ಸಿದ್ದೇಶ್ವರ ಶ್ಲಾಘನೆ**

ದಾವಣಗೆರೆ, ಮೇ 9- ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಆಗಿರುವ ಲಾಕ್ ಡೌನ್ ಸಂದರ್ಭದಲ್ಲಿ ಸಂಕಷ್ಟ ಪರಿಸ್ಥಿತಿಯಲ್ಲಿರುವ ಸೋಂಕಿತರು ಮತ್ತು ಬಡವರಿಗೆ ಉಚಿತವಾಗಿ ಅನ್ನ ದಾಸೋಹ ಮಾಡುತ್ತಿರುವ ತರಳಬಾಳು ಸೇವಾ ಸಮಿತಿ, ಶಿವಸೈನ್ಯ ಯುವಕರ ಸಂಘ ಹಾಗೂ ದಾನಿಗಳ ಸೇವೆ ಶ್ಲಾಘನೀಯ ಎಂದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಹೇಳಿದರು.

ಇಲ್ಲಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನಕ್ಕೆ ಇಂದು ಸಂಜೆ ಭೇಟಿ ನೀಡಿದ ಅವರು, ದಾಸೋಹದ ಸಿದ್ಧತೆಯನ್ನು ವೀಕ್ಷಿಸಿ, ದಾನಿಗಳ ಮತ್ತು ಸ್ವಯಂ ಸೇವಕರ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರಲ್ಲದೇ, ಈ ಸತ್ಕಾರ್ಯಕ್ಕೆ ತಾವೂ ಕೂಡಾ ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದರು. ದಾನಿಗಳು ಮುಂದೆ ಬಂದು ಈ ಕಾರ್ಯದಲ್ಲಿ ಭಾಗಿಯಾಗುವಂತೆ ಸಂಸದರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ.ವೀರೇಶ್, ಆಯುಕ್ತ ವಿಶ್ವನಾಥ್ ಮುದಜ್ಜಿ, ಶಶಿಧರ್ ಹೆಮ್ಮನಬೇತೂರು, ಮಾಗನೂರು ಉಮೇಶ್ ಗೌಡ್ರು, ಲಿಂಗರಾಜ್ ಅಗಸನಕಟ್ಟೆ, ಶ್ರೀನಿವಾಸ್ ಮೆಳ್ಳೇಕಟ್ಟೆ, ಕೊರಟಿಕೆರೆ ಶಿವಕುಮಾರ್, ಪ್ರಭು ಕಾವಲಹಳ್ಳಿ, ಹಾಲೇಶ್, ಸಿ.ಹೆಚ್. ದೇವರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಕ್ಕಳಲ್ಲಿ ಕೋವಿಡ್ - 19 ಮುನ್ನೆಚ್ಚರಿಕೆ ಕ್ರಮಗಳು

ಇತ್ತೀಚಿನ ದಿನಗಳಲ್ಲಿ ಕೋವಿಡ್-19 ಎಂಬ ವೈರಾಣು ಸಾಂಕ್ರಾಮಿಕ ರೋಗವಾಗಿ ವಿಶ್ವದಾದ್ಯಂತ ವ್ಯಾಪಕವಾಗಿ ಹರಡಿ ಅನೇಕ ಸಾವು, ನೋವುಗಳನ್ನು ಉಂಟು ಮಾಡಿದೆ. ಈಗ ಭಾರತದಲ್ಲಿ ಎರಡನೇ ಅಲೆ ಉಂಟಾಗಿದ್ದು ಬಹಳ ವೇಗವಾಗಿ ಹರಡುತ್ತಿದೆ. ಮಕ್ಕಳಿಂದ ಎಲ್ಲ ವಯೋಮಾನದವರಿಗೂ ಬರಬಹುದು. ಹುಟ್ಟಿದಾಗಿನಿಂದ ಹಿಡಿದು ಹದಿಹರೆಯದ ವಯಸ್ಸಿನವರಿಗೂ ಬರಬಹುದು. ವಯಸ್ಸು ಹೆಚ್ಚಾದಂತೆಲ್ಲ ಕೊರೊನಾ ಕೂಡ ಹೆಚ್ಚು ಇರುವುದು ಕಂಡು ಬಂದಿದೆ.

ಪ್ರಪಂಚದಾದ್ಯಂತ ಕೋವಿಡ್ ವ್ಯಾಪಕವಾಗಿ ಹಬ್ಬುತ್ತಿದ್ದರೂ ಕೂಡ, ಚಿಕ್ಕ ಮಕ್ಕಳಲ್ಲಿ ಕೋವಿಡ್ ಸೋಂಕು ಅತಿ ಕಡಿಮೆ ಪ್ರಮಾಣದಲ್ಲಿ ಇರುವುದು ಕಂಡು ಬಂದಿದೆ. ಇತ್ತೀಚಿಗೆ ಇತರೆ ದೇಶಗಳ ವರದಿ ಪ್ರಕಾರ ಶೇ. 14% ನಷ್ಟು ಮಕ್ಕಳಲ್ಲಿ ಸೋಂಕು ಇರುವುದು ಲ್ಯಾಬ್ ಟೆಸ್ಟ್‌ನಿಂದ ದೃಢ ಪಟ್ಟಿದೆ. ಅಮೆರಿಕಾದಲ್ಲಿ 18 ವರ್ಷ ವಯಸ್ಸಿನ ಒಳಗಿನ ಮಕ್ಕಳಲ್ಲಿ ಶೇ. 12-14 ನಷ್ಟು ಇದೆ.

**ಮಕ್ಕಳಲ್ಲಿ ಕಂಡುಬರುವ ರೋಗ ಲಕ್ಷಣಗಳೇನು ?.**

ಸಾಮಾನ್ಯವಾಗಿ ಮಕ್ಕಳಲ್ಲಿ ಯಾವುದೇ ರೋಗ ಲಕ್ಷಣಗಳು ಇರುವುದಿಲ್ಲ. ಯಾವುದೇ ನಿರ್ದಿಷ್ಟವಾದ ರೋಗ ಲಕ್ಷಣಗಳು ಇರದ ಕಾರಣ, ಸಾಮಾನ್ಯವಾಗಿ ಇತರೆ ವೈರಲ್ ರೋಗಗಳಲ್ಲಿ ಕಂಡು ಬರುವ ರೋಗ ಲಕ್ಷಣಗಳಾದ ಜ್ವರ, ಕೆಮ್ಮು, ನೆಗಡಿ, ಮೈ ಕೈ ನೋವು, ಸುಸ್ತು, ಆಯಾಸ, ತಲೆ ನೋವು, ಗಂಟಲು ನೋವು, ಉಸಿರಾಟದ ತೊಂದರೆ, ಹಾಗೂ ವಾಂತಿ, ಬೇಧಿ ಕೂಡ



ಉಂಟಾಗುವುದು. ಹಾಗಾಗಿ ಇದು ಕೋವಿಡ್-19 ಲಕ್ಷಣಗಳೇ ಎಂದು ಹೇಳುವುದು ಕಷ್ಟವಾಗುತ್ತದೆ. ತಾಯಂದಿರು ಈ ಲಕ್ಷಣಗಳನ್ನು ಗುರುತಿಸಿ, ಸಲಹೆ ಪಡೆಯಿರಿ.

ಮಕ್ಕಳಲ್ಲಿ ಸೋಂಕು ಇದೆ ಎಂದು ಪತ್ತೆ ಆದಾಗ ಆತಂಕ ಪಡುವುದು ಸಹಜ. ಪೋಷಕರು ಯಾವುದೇ ರೀತಿಯ ಭಯ ಪಡುವುದು ಬೇಡ. ಸಾಮಾನ್ಯವಾಗಿ ಸೌಮ್ಯ ಹಾಗೂ ಮಧ್ಯಮ ರೂಪದ ಲಕ್ಷಣಗಳಿದ್ದಲ್ಲಿ ಮನೆಯಲ್ಲಿಯೇ ಚಿಕಿತ್ಸೆ ಕೊಡಬಹುದು. ಉದಾಹರಣೆ ನೆಗಡಿ ಕೆಮ್ಮು ಹಾಗೂ ಜ್ವರಕ್ಕೆ ಮನೆಯಲ್ಲಿಯೇ ಚಿಕಿತ್ಸೆ ಕೊಡಬಹುದು.

14 ವರ್ಷದೊಳಗಿನ ಮಕ್ಕಳಲ್ಲಿ ಚೇತರಿಕೆಯ ಚೈತನ್ಯ ಹೆಚ್ಚಾಗಿ ಇರುತ್ತದೆ. ಹೀಗಾಗಿ ಅವರ ಆರೋಗ್ಯಕ್ಕೆ ಯಾವುದೇ ಅಪಾಯವಿರುವುದಿಲ್ಲ. ಮಕ್ಕಳಲ್ಲಿ ವಿಶೇಷವಾದ ಆರೈಕೆಯು ಬೇಕಾಗಿಲ್ಲ. ಹಾಗಾಗಿ ಅವರಿಗೆ ಯಾವುದೇ ತರಹದ ಚಿಕಿತ್ಸೆ ಬೇಡ. ಯಾವುದಕ್ಕೂ ವೈದ್ಯರ ಬಳಿ ಸಲಹೆ ಪಡೆದು ಸೂಕ್ತ ಚಿಕಿತ್ಸೆ ಕೊಡಿಸಿದರೆ ಬೇಗನೆ ಗುಣ ಹೊಂದುತ್ತಾರೆ. ಚಿಕ್ಕ ಮಕ್ಕಳಿಗೆ ಸಾಮಾನ್ಯವಾಗಿ ಮನೆಯಲ್ಲಿನ ದೊಡ್ಡವರ ಸೋಂಕಿತ ವ್ಯಕ್ತಿಯಿಂದ ಬರುತ್ತದೆ. ಸೋಂಕಿತ ಮಕ್ಕಳನ್ನು ಹೊರಗಡೆ ಓಡಾಡಲು ಬಿಡಬೇಡಿ. ಅವರನ್ನು ಐಸೋಲೇಷನ್ ಮಾಡುವುದು ಒಳ್ಳೆಯದು. ಅದರಲ್ಲೂ ವಯೋವೃದ್ಧರು ಇರುವ ಮನೆಯಲ್ಲಿ ಸಂಪರ್ಕಕ್ಕೆ ಬಾರದಿರುವ ಹಾಗೆ ನೋಡಿಕೊಳ್ಳಿ. ಕೊರೊನಾ ತೀವ್ರತೆ ವಯಸ್ಸಾದವರಿಗೆ ಮಾತ್ರ, ಮಕ್ಕಳಲ್ಲಿ ಅಲ್ಲ ಎಂಬುದನ್ನು ತಿಳಿಯಿರಿ. ತೀವ್ರತೆರನಾದ ಸೋಂಕು ಇದ್ದಲ್ಲಿ ಹಾಗೂ ಹೈರಿಸ್ಕ್ ಇರುವ ಮಕ್ಕಳನ್ನು ಮಾತ್ರ ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಿಸಿ. ಹೈರಿಸ್ಕ್ ಅಂದ್ರೆ, ಹೃದಯ ಸಂಬಂಧಿ ಕಾಯಿಲೆ, ನರರೋಗಗಳ ಕಾಯಿಲೆ, ಅನುವಂಶಿಕವಾದ ಕಾಯಿಲೆಯಿದ್ದಲ್ಲಿ, ಬೊಜ್ಜುತನ, ಉಸಿರಾಟದ ಸಮಸ್ಯೆ ಹಾಗೂ ಕಿಡ್ನಿ, ಲಿವರ್ ಗೆ ಸಂಬಂಧಿಸಿದಂತೆ ಸಮಸ್ಯೆಗಳಿದ್ದಂತಹ ಮಕ್ಕಳನ್ನು ಮಾತ್ರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಬೇಕು.

**ಸೋಂಕಿತ ತಾಯಿ ತನ್ನ ಮಗುವನ್ನು ಹೇಗೆ ನೋಡಿಕೊಳ್ಳಬೇಕು ?**

ಸೋಂಕಿತ ತಾಯಿ ತನ್ನ ಮಗುವನ್ನು ಹೆರಿಗೆಯಾದ ನಂತರ ಬೇರ್ಪಡಿಸುವುದು ಬೇಡ. ತಾಯಿ ಮಗು ಒಂದೇ ಕಡೆ ಇರಲಿ. ತನ್ನ ಬಳಿಯೇ ಇಟ್ಟುಕೊಂಡು ತನ್ನ ಎದೆ ಹಾಲನ್ನು ಕೊಡಬಹುದು. ಅದಕ್ಕೂ ಮುನ್ನ ಅವಶ್ಯವಾಗಿ ಕೋವಿಡ್-19 ಸುರಕ್ಷತಾ ಕ್ರಮವನ್ನು ಪಾಲಿಸಬೇಕು. ಮುಖಕ್ಕೆ ಕಡ್ಡಾಯವಾಗಿ ಮಾಸ್ಕನ್ನು ಧರಿಸುವುದು, ಸ್ವಚ್ಛವಾಗಿ ಕೈಗಳನ್ನು ತೊಳೆದುಕೊಂಡು, ಎದೆಯ ಭಾಗವನ್ನು ಸ್ವಚ್ಛವಾಗಿ ಒರೆಸಿಕೊಂಡು ಎದೆ ಹಾಲುಣಿಸಬೇಕು. ಎದೆ ಹಾಲಿನಲ್ಲಿ ರೋಗ ನಿರೋಧಕ ಶಕ್ತಿಯಿರುವುದರಿಂದ, ಮಗುವಿಗೂ ಕೂಡ ರಕ್ಷಣೆ ಒದಗಿಸುವುದು. ವಿಶ್ವ ಸಂಸ್ಥೆಯ ವರದಿಯ ಪ್ರಕಾರ ಸೋಂಕಿತ ತಾಯಂದಿರ ಎದೆ ಹಾಲಿನಲ್ಲಿ ಯಾವುದೇ ರೋಗಾಣುಗಳು ಪತ್ತೆಯಾಗಿಲ್ಲ. ಹಾಗಾಗಿ ತಾಯಿಯು ಅವಶ್ಯವಾಗಿ ಮಗುವಿಗೆ ತನ್ನ ಎದೆ ಹಾಲನ್ನು ಕೊಡಬಹುದು.

**ಕೋವಿಡ್ ಟೆಸ್ಟ್ ಯಾವಾಗ ಮಾಡಿಸಬೇಕು ?**

ಎಲ್ಲ ಮಕ್ಕಳಿಗೂ ಕೋವಿಡ್‌ಟೆಸ್ಟ್ ಮಾಡಿಸುವ ಅವಶ್ಯಕತೆ ಇರುವುದಿಲ್ಲ. ಯಾವ ಮಕ್ಕಳಲ್ಲಿ ಸೋಂಕಿತ ವ್ಯಕ್ತಿಯೊಂದಿಗೆ ಸಂಪರ್ಕ ಹೊಂದಿದ್ದು, ಸೋಂಕಿತ ಲಕ್ಷಣಗಳಿದ್ದಲ್ಲಿ ಮತ್ತು ಮಗು ಬೇರೆ ಕಾರಣದಿಂದಾಗಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಲ್ಲಿ ಅಥವಾ ಅನುಮಾನವಿದ್ದಲ್ಲಿ, ಯಾವುದೇ ಸರ್ಜರಿ ಅಥವಾ ಪ್ರೊಸೀಜರ್ ಇದ್ದಲ್ಲಿ ಹಾಗೂ ಶಾಲಾ-ಕಾಲೇಜು ಎಂಟ್ರಿ ಸಮಯದಲ್ಲಿ ಮಾತ್ರ ಪರೀಕ್ಷೆ ಮಾಡಿಸಬೇಕು.

ಯಾವುದೇ ಕಾರಣಕ್ಕೂ ಮಕ್ಕಳಲ್ಲಿ ಸೋಂಕು ಕಂಡಲ್ಲಿ ಭಯ ಪಡುವುದು ಬೇಡ. ಅನಾವಶ್ಯಕವಾಗಿ ಯಾವುದೇ ಔಷಧಿಗಳನ್ನು ಕೊಡಬೇಡಿ. ವೈದ್ಯರೊಡನೆ ಸಮಾಲೋಚಿಸಿ ಸೂಕ್ತ ಸಲಹೆ ಪಡೆಯಿರಿ. ಸೋಂಕನ್ನು ನಿಯಂತ್ರಿಸಲು ಕಡ್ಡಾಯವಾಗಿ ಮಾಸ್ಕನ್ನು ಧರಿಸಿ, ಸ್ವಚ್ಛವಾಗಿ ಕೈಗಳನ್ನು ತೊಳೆದುಕೊಳ್ಳಿ, ಸಾಮಾಜಿಕ ಅಂತರವನ್ನು ಕಾಪಾಡಿ. ಇದರಿಂದ ನೀವು ಸುರಕ್ಷಿತವಾಗಿಡಲು ಬಿಡಿ.



- **ಡಾ. ಲತಾ ಜಿ. ಎಸ್.**
ಮಕ್ಕಳ ತಜ್ಞರು,
ಎಸ್.ಎಸ್.ಐ.ಎಂ.
ಎಸ್. ಹಾಸ್ಪಿಟಲ್,
ದಾವಣಗೆರೆ.

# ಕೊರೊನಾದಿಂದ ಮಾಜಿ ಸಚಿವ ಕೆ.ಬಿ. ಶಾಣಪ್ಪ ನಿಧನ

ಕಲಬುರ್ಗಿ, ಮೇ 9 - ಮಾಜಿ ಸಚಿವ, ಮಾಜಿ ಸಂಸದ ಕೆ.ಬಿ. ಶಾಣಪ್ಪ (79) ಅವರು ಕೊರೊನಾದಿಂದಾಗಿ ಇಲ್ಲಿನ ಜಿಮ್ಸ್ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾಗಿದ್ದಾರೆ. ಕೊರೊನಾ ದೃಢಪಟ್ಟಿದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗಲಿಲ್ಲ.

ಪತ್ನಿ, ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅವರು ಅಗಲಿದ್ದಾರೆ.

ಶಾಣಪ್ಪ ಅವರು ಕಲಬುರ್ಗಿ ಭಾಗದ ಪ್ರಭಾವಿ ದಲಿತ ನಾಯಕರಾಗಿದ್ದರು. ವಾಡಿಯ ಎಸಿಸಿ ಸಿಮೆಂಟ್ ಕಾರ್ಖಾನೆಯ ಕಾರ್ಮಿಕ ಮುಖಂಡರಾಗಿದ್ದ ಶಾಣಪ್ಪ, ಅಂದಿನ ಶಹಾಬಾದ್ ವಿಧಾನಸಭಾ ಕ್ಷೇತ್ರದಿಂದ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ದಿಂದ ಸ್ಪರ್ಧಿಸಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು.

ನಂತರ ಜೆ.ಎಚ್. ಪಟೇಲ್ ಸಂಪುಟದಲ್ಲಿ ಅಬಕಾರಿ ಸಚಿವರಾದರು. ಆ ಸಂದರ್ಭ, ಶಾಸಕರಾಗಿಲ್ಲದ ಕಾರಣ ಅವರನ್ನು ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡಲಾಗಿತ್ತು. ನಂತರ ಬಿಜೆಪಿಗೆ ಸೇರ್ಪಡೆಯಾಗಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. 2018ರಲ್ಲಿ ಕಾಂಗ್ರೆಸ್ ಗೆ ಸೇರ್ಪಡೆಯಾಗಿದ್ದರು.

ಅವರ ನಿಧನದಿಂದ ಒಬ್ಬ ನೇರ, ನಿಷ್ಠೂರ ಸ್ವಭಾವದ ನಾಯಕರನ್ನು ಕಳೆದುಕೊಂಡಂತಾಗಿದೆ. ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ, ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ಈ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಮುಖ್ಯಮಂತ್ರಿಗಳು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

# ಮೃತ ಪತ್ರಕರ್ತ ಮತ್ತು ರೈತರ ಕುಟುಂಬಕ್ಕೆ ಪರಿಹಾರ ನೀಡಲು ಒತ್ತಾಯ



ದಾವಣಗೆರೆ,ಮೇ 9- ಸಿಡಿಲು ಬಡಿದು ಸಾವಿಗೀಡಾದ ಇಬ್ಬರು ರೈತರಿಗೆ ಮತ್ತು ಕೊರೊನಾ ಭಯದಿಂದ ಆತ್ಮಹತ್ಯೆ ಮಾಡಿಕೊಂಡ ಪತ್ರಕರ್ತನಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ 1 ಕೋಟಿ ರೂ. ಮಂಜೂರು ಮಾಡುವಂತೆ ಅವಾಂತರ ಪತ್ರಿಕೆ ಸಂಪಾದಕರೂ ಆದ ಕೆಪಿಸಿಸಿ ಕಾರ್ಯದರ್ಶಿ ಹೆಚ್. ದುಗ್ಗಪ್ಪ ಅವರು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಮಾಯಕೊಂಡ ತಾಲ್ಲೂಕಿನ ಹುಚ್ಚವ್ವನಹಳ್ಳಿಯ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸಿಡಿಲು ಬಡಿದ ಪರಿಣಾಮ ರವಿ ಮತ್ತು ರಮೇಶ್ ಮೃತಪಟ್ಟಿದ್ದಾರೆ. ಕೊರೊನಾ ಭಯದಿಂದ ಕುಂದೂರು ಪರಮೇಶ್ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಮೂವರು ಅವರುಗಳ ಕುಟುಂಬಗಳ ಆಧಾರ ಸ್ತಂಭವಾಗಿದ್ದರು. ಕಾರಣ, ಅವರುಗಳ ಕುಟುಂಬಕ್ಕೆ ಪರಿಹಾರ ನೀಡುವಂತೆ ದುಗ್ಗಪ್ಪ ಅವರು ಆಗ್ರಹಿಸಿದ್ದಾರೆ.

ಈ ಸಂಬಂಧ ಮಾಯಕೊಂಡ ಕ್ಷೇತ್ರದ ಶಾಸಕ ಪ್ರೊ. ಲಿಂಗಣ್ಣ ಮತ್ತು ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡುವುದರ ಮೂಲಕ ಮೃತರ ಕುಟುಂಬಗಳಿಗೆ ಪರಿಹಾರ ಒದಗಿಸುವುದರೊಂದಿಗೆ ಸಹಕರಿಸುವಂತೆ ಅವರು ಮನವಿ ಮಾಡಿದ್ದಾರೆ.

# ಗೋವಕ್ಕಿಯ ಸಹಬಾಳ್ವೆ

ಹುಲ್ಲು ಬೆಳೆಯುವಲ್ಲಿ ಕೀಟಗಳಿದ್ದದ್ದೇ. ಹುಲ್ಲು ಹಸುಗಳ ಆಹಾರವಾದರೆ ಹುಲ್ಲಿನಲ್ಲಿರುವ ಕಾಳು ಮತ್ತು ಕೀಟಗಳು ಕೆಲವು ಹಕ್ಕಿಗಳ ಆಹಾರ. ಪರಿಸರದ ಸಮತೋಲನ ಈ ಆಹಾರ ಸರಪಳಿಯ ಮೇಲೆ ಅವಲಂಬಿತ. ಪ್ರಕೃತಿಯಲ್ಲಿ ಎಲ್ಲರೂ ಸಮಾನರು ಮತ್ತು



ಸಮಭಾಗಿಗಳು. ಇಲ್ಲಿ ಕಾಣುವ ಕೊಕ್ಕರೆ ಜಾತಿಗೆ ಸೇರಿದ ಬೆಳ್ಳಕ್ಕಿಯನ್ನು ಗೋವಕ್ಕಿ ಎಂದೂ ಆಂಗ್ಲ ಭಾಷೆಯಲ್ಲಿ ಕ್ಯಾಟಲ್ ಇಗ್ರೆಟ್ ಎಂದು ಕರೆಯುವರು. ಹುಲ್ಲನ್ನು ಮೇಯುವ ಹಸುವಿನ ತಲೆಯ ಹತ್ತಿರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಗೋವಕ್ಕಿ ಸಾಗುತ್ತದೆ. ಹಸು ಮೇಯುವಾಗ ಹುಲ್ಲಿನ ಕೀಟಗಳು ಅತ್ತಿತ್ತ ಹಾರಿದೊಡನೆ ಗಬಕ್ಕನೆ ಹಿಡಿದು ನುಂಗುತ್ತವೆ. ಅಂದರೆ ಹಸುಗಳು ಕೀಟವನ್ನು ಚದುರಿಸಿ ತನಗರಿವಿಲ್ಲದೆ ಗೋವಕ್ಕಿಗಳ ಆಹಾರವನ್ನು ಹುಡುಕಿಕೊಡುತ್ತವೆ. ಗೋವಕ್ಕಿಗಳು ಸಹ ಹಸುವಿನ ಮೈಮೇಲಿರುವ ಉಣ್ಣೆ ಮತ್ತಿತರೆ ಕೀಟಗಳನ್ನು ತಿನ್ನುತ್ತವೆ. ಇದಲ್ಲವೇ ಸಹಬಾಳ್ವೆ. ಅಂದಹಾಗೆ ಕೆಸರುಗದ್ದೆ ಉಳುವ ನೇಗಿಲ ಅಥವಾ ಟ್ರ್ಯಾಕ್ಟರ್‌ನ ಅಚೀಚೆ ಕೆಸರಿನ ಕೀಟಗಳಿಗಾಗಿ ಓಡಾಡುವ ಇದೇ ಬೆಳ್ಳಕ್ಕಿಗಳ ಗುಂಪನ್ನು ಕಾಣಬಹುದು. ತನಗರಿವಿಲ್ಲದೇ ಬೇರೆಯವರಿಗೆ ಮಾಡುವ ಸಹಾಯದಲ್ಲಿ ಜೀವನದ ಸಾರ್ಥಕತೆ ಅಡಗಿದೆಯಲ್ಲವೇ?

- **ಡಾ. ಎಸ್. ಶಿಶುಪಾಲ,**
ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

**ರಂಜಾನ್ ರೋಜಾ ಸಮಯ**

ದಿನಾಂಕ 10.05.2021
ಇಫ್ತೇಯಾರಿ ಸಮಯ : 6-51

ದಿನಾಂಕ 11.05.2021 ಸಹೇರಿ
ಸಮಯ : 4-42

# ಜೀವದ ಜೊತೆ ಚೆಲ್ಲಾಟ ಬೇಡ: ರಂಭಾಪುರಿ ಶ್ರೀ

ಬಾಳೆಹೊನ್ನೂರು, ಮೇ 9- ಕೊರೊನಾ ವೈರಸ್ 2ರ ಅಲೆ ವ್ಯಾಪಕವಾಗಿ ಹರಡುತ್ತಿದ್ದು, ನಿಯಂತ್ರಣಕ್ಕೆ ಬರುವುದು ಕಷ್ಟದಾಯಕವಾಗಿದೆ. ರಾಜ್ಯದಲ್ಲಿ ದಿನಕ್ಕೆ 50 ಸಾವಿರದಷ್ಟು ಸೋಂಕಿತರು ಪತ್ತೆಯಾಗುತ್ತಿದ್ದು ಜನರು ಜೀವದ ಜೊತೆಗೆ ಚೆಲ್ಲಾಟ ಆಡುವುದನ್ನು ನಿಲ್ಲಿಸಿ ಕೋವಿಡ್ ನಿಯಮಗಳನ್ನು ಪಾಲಿಸುವುದು ಅಗತ್ಯವಾಗಿದೆ ಎಂದು ಶ್ರೀಮದ್ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಇಂದು ಸರ್ಕಾರಿ ವೈದ್ಯರಿಂದ ಕೋವಿಡ್ 2ನೇ ಹಂತದ ಲಸಿಕೆ ಪಡೆದ ನಂತರ ಸುದ್ದಿಗಾರರಿಗೆ ಈ ವಿಷಯ



ತಿಳಿಸಿದರು.

ಬೆಂಗಳೂರಿನಂತಹ ಮಹಾ ನಗರದಲ್ಲಿ ಬೆಡ್ ದೊರೆಯುತ್ತಿಲ್ಲ. ಆಕ್ಸಿಜನ್ ಸಿಗುತ್ತಿಲ್ಲ. ಪರಿಸ್ಥಿತಿ ಬಹಳ ಗಂಭೀರವಾಗಿದ್ದು, ಪ್ರತಿಯೊಬ್ಬರೂ ಅನಾವಶ್ಯಕ ಓಡಾಟ ತಪ್ಪಿಸಬೇಕು. ಮಾಸ್ಕ್ ಧಾರಣೆ, ಸ್ಯಾನಿಟೈಜೇಶನ್‌ಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಜೊತೆಗೆ ಸರಕಾರದವರು ಉಚಿತವಾಗಿ ನೀಡುತ್ತಿರುವ ಕೋವಿಡ್ ಲಸಿಕೆಯನ್ನು 2 ಹಂತಗಳಲ್ಲಿ ಪಡೆಯಬೇಕು. ಸರ್ಕಾರದ ಮಾರ್ಗಸೂಚಿಗಳನ್ನುಪಾಲಿಸುವುದರೊಂದಿಗೆ ಸ್ವಯಂ ನಿಯಂತ್ರಣಕ್ಕೆ ಒಳಪಡಬೇಕು. ತಮ್ಮ ತಮ್ಮ ಕುಟುಂಬದವರ ರಕ್ಷಣೆಯ ಬಗ್ಗೆ ಗಂಭೀರ ಚಿಂತನೆ ಮಾಡಿ ಸುರಕ್ಷತೆಯನ್ನು ಪಾಲಿಸಿಕೊಂಡು ಬರಬೇಕೆಂದು ಶ್ರೀ ರಂಭಾಪುರಿ ಜಗದ್ಗುರುಗಳು ಕರೆ ನೀಡಿದ್ದಾರೆ.

# ಹಿಂದೂ ಸಾಗರಲ್ಲಿ ಚೀನಾ ರಾಕೆಟ್ ಪತನ

ಬೀಜಂಗ್, ಮೇ 9 – ಚೀನಾದ ಅತಿ ದೊಡ್ಡ ರಾಕೆಟ್ ಮಾಲ್ಡೀವ್ಸ್ ಬಳಿ ಹಿಂದೂ ಮಹಾಸಾಗರದಲ್ಲಿ ಪತನವಾಗಿದೆ. ಬಾಹ್ಯಾಕಾಶದಲ್ಲಿ ಅವಶೇಷ ಹರಡುವುದನ್ನು ತಪ್ಪಿಸುವ ಬಗ್ಗೆ ಕಾಳಜಿ ವಹಿಸುವಲ್ಲಿ ಚೀನಾ ವಿಫಲವಾಗಿದೆ ಎಂದು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಟೀಕಿಸಿದೆ.

ಚೀನಾ ಏಪ್ರಿಲ್ 29ರಂದು ಬಾಹ್ಯಾಕಾಶ ಕೇಂದ್ರದ ಪ್ರಮುಖ ಭಾಗವೊಂದನ್ನು ಕಕ್ಷೆಗೆ ಹಾರಿಸಿತ್ತು. ಆದರೆ, ಅದು ನಿಯಂತ್ರಣ ಕಳೆದುಕೊಂಡು ರಾಕೆಟ್‌ನ ಅವಶೇಷಗಳು ಭೂಮಿಗೆ ಬಿದ್ದಿವೆ ಎಂದು ಚೀನಾದ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ.

ಬೀಜಿಂಗ್ ಕಾಲಮಾನದ ಪ್ರಕಾರ ಭಾನುವಾರ ಬೆಳಿಗ್ಗೆ 10.24ಕ್ಕೆ ರಾಕೆಟ್ ಅವಶೇಷಗಳು ಸಮುದ್ರಕ್ಕೆ ಬಿದ್ದಿವೆ.

# ಹೆಚ್ಕೆಆರ್ ನಿಧನಕ್ಕೆ ಇಂಟೆಕ್ ಸಂತಾಪ

ದಾವಣಗೆರೆ,ಮೇ 9- ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ನಿಧನಕ್ಕೆ ಜಿಲ್ಲಾ ಇಂಟೆಕ್ ಅಧ್ಯಕ್ಷ ಆರ್. ಎಸ್ .ತಿಪ್ಪೇಸ್ವಾಮಿ, ರಾಷ್ಟ್ರೀಯ ಘಟಕದ ಉಪಾಧ್ಯಕ್ಷ ಎನ್. ಎಂ. ಅಜ್ಜಂತಯ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿ ವೆಂಕಟೇಶ್, ರಾಜ್ಯ ಕಾರ್ಯದರ್ಶಿ ಬಿ.ಶಾಂತಕುಮಾರ್, ಪುಟ್ಟಸ್ವಾಮಿ ಸಂತಾಪ ವ್ಯಕ್ತಪಡಿಸಿದ್ದಾರೆ.

# ಅನಧಿಕೃತ ಬಿತ್ತನೆ ಬೀಜ ಮಾರಾಟ ಮಾಡಿದರೆ ಕಾನೂನು ಕ್ರಮ




ಜಗಳೂರು, ಮೇ 9- ಕೃಷಿ ಇಲಾಖೆಯಿಂದ ಪರವಾನಗಿ ಪಡೆಯದೇ ಇರುವಂತವರು ಮೆಕ್ಕೆ ಜೋಳ ಬಿತ್ತನೆ ಬೀಜ ಮತ್ತು ಗೊಬ್ಬರಗಳನ್ನು ಮಾರಾಟ ಮಾಡಿದರೆ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸುಲು ಅಂಗಡಿ ಮಾಲೀಕರಿಗೆ ಸೂಚನೆ ನೀಡಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ಮಳಿಗೆ, ಗೋದಾಮುಗಳಿಗೆ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ತಂಡ ದಿಢೀರನೇ ಭೇಟಿ ನೀಡಿ ಪರಿಶಿಲನೆ ನಡೆಸಿತು.

ಈ ವೇಳೆ ಮಾತನಾಡಿದ ಅವರು, ಗುಣಮಟ್ಟವಲ್ಲದ ಮೆಕ್ಕೆಜೋಳದ ಬಿತ್ತನೆ ಬೀಜ ಮತ್ತು ಗೊಬ್ಬರಗಳು ತಾಲ್ಲೂಕಿನ ಕೆಲವು ಕಡೆ ಮಾರಾಟವಾಗುತ್ತಿವೆ ಎಂಬ ಮಾಹಿತಿ ಬಂದಿದೆ. ಗೋದಾಮುಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಾಗುತ್ತಿದೆ. ಕೆಲವು ಅಂಗಡಿ ಮಾಲೀಕರು ಬಾಗಿಲು ಮುಚ್ಚಿದ್ದಾರೆ. ಮತ್ತೆ ಕೆಲವರು ಪರಿಶೀಲನೆಗೆ ಸಹಕಾರ ನೀಡುತ್ತಿಲ್ಲ. ಬೀಜ ಗೊಬ್ಬರ ಮಾರಾಟ ಮಾಡಲಿ. ಆದರೆ, ಕೃಷಿ ಇಲಾಖೆಯಿಂದ ಪರವಾನಿಗೆ ಪಡೆದು ಮಾರಾಟ ಮಾಡಬೇಕು. ಪರವಾನಗಿ ಇಲ್ಲದೇ ಮಾರಾಟ ಮಾಡಿದರೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ರೈತರು ಯಾರೋ ನೀಡುವ ಬಿತ್ತನೆ ಬೀಜ ತೆಗೆದು ಕೊಳ್ಳಬಾರದು. ಸರ್ಟಿಫೈಡ್ ಅಂಗಡಿಗಳಿಗೆ ತೆರಳಿ ಬೀಜ ಖರೀದಿ ಮಾಡಬೇಕು. ಜೊತೆಗೆ ರಸೀದಿಯನ್ನು ತಪ್ಪದೇ ಪಡೆಯಬೇಕು ಎಂದು ಮನವಿ ಮಾಡಿದರು. ಕೃಷಿ ಅಧಿಕಾರಿಗಳಾದ ಹರ್ಷ, ರೇಣುಕುಮಾರ್, ಕೃಷ್ಣಪ್ಪ, ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

# ಭದ್ರಾ ಬಲದಂಡೆ ನಾಲೆಗೆ ಮೇ 20 ರವರೆಗೆ ನೀರು

**ಮೇ 30 ರವರೆಗೆ ನೀರು ಹರಿಸುವಂತೆ ಕೊನೆ ಭಾಗದ ರೈತರ ಒತ್ತಾಯ**

ಮಲೇಬೆನ್ನೂರು, ಮೇ 9- ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ ಹರಿಸುತ್ತಿರುವ ನೀರನ್ನು ಮೇ 20 ರವರೆಗೆ ಮುಂದುವರೆಸುವುದಾಗಿ ಭದ್ರಾ ಕಾಡಾದಿಂದ ಅಧಿಸೂಚನೆ ಹೊರಡಿಸಲಾಗಿದೆ.

ಭದ್ರಾ ಅಚ್ಚುಕಟ್ಟು ಪ್ರದೇಶದ ಬೇಸಿಗೆ ಬೆಳೆಗಳಿಗೆ ಜನವರಿ 13 ರಿಂದ ಸತತವಾಗಿ 120 ದಿನಗಳ ಕಾಲ ನೀರು ಹರಿಸಲು ತೀರ್ಮಾನಿಸಲಾಗಿತ್ತು.

ಈ ಪ್ರಕಾರ ಮೇ 12 ರಂದು ನಾಲೆಗಳಲ್ಲಿ ನೀರು ನಿಲುಗಡೆ ಮಾಡಬೇಕಾಗಿತ್ತು. ಆದರೆ, ಭದ್ರಾ ಕಾರ್ಯಪಾಲಕ ಇಂಜಿನಿಯರ್‌ಗಳು ಅಚ್ಚುಕಟ್ಟಿನ ಕೊನೆ ಭಾಗದ ಬೆಳೆಗಳಿಗೆ ಇನ್ನೊಂದು ವಾರ ನೀರು ಬೇಕಾಗುತ್ತದೆ ಎಂಬ ವರದಿ ನೀಡಿದ ಹಿನ್ನೆಲೆಯಲ್ಲಿ ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಅವರು ಮೇ 20 ರವರೆಗೆ ನಾಲೆಯಲ್ಲಿ ನೀರು ಮುಂದುವರೆಸುವಂತೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಭದ್ರಾ ಯೋಜನಾ ವೃತ್ತದ ಅಧೀಕ್ಷಕ ಇಂಜಿನಿಯರ್ ಎಂ. ಚಂದ್ರಹಾಸ್ ತಿಳಿಸಿದ್ದಾರೆ.

**30 ರವರೆಗೆ ನೀರು ಹರಿಸಿ :** ಮೇ 20 ರವರೆಗೆ ಮಾತ್ರ ನೀರು ಮುಂದುವರೆಸಿದರೆ ಅಚ್ಚುಕಟ್ಟಿನ ಕೊನೆ ಭಾಗದ ಭತ್ತದ ಬೆಳೆಗೆ ತೊಂದರೆ ಆಗಲಿದೆ. ಆದ್ದರಿಂದ ಮೇ 30 ರವರೆಗೆ ನೀರು ಹರಿಸುವಂತೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಿ ಎಂದು ಭದ್ರಾ ಕಾಡಾ ಅಧ್ಯಕ್ಷರನ್ನು ಕೊನೆ ಭಾಗದ ರೈತರು ಒತ್ತಾಯಿಸಿದ್ದಾರೆ.

# ಹೆಚ್‌ಕೆಆರ್ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ



ದಾವಣಗೆರೆ, ಮೇ 9- ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ.ರಾಮಚಂದ್ರಪ್ಪ ಅವರ ನಿಧನಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಮಚಂದ್ರಪ್ಪ ಅವರು ದಾವಣಗೆರೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಘಟನೆಯಲ್ಲಿ ಪಂಪಾಪತಿಯವರೊಂದಿಗೆ ತೊಡಗಿ ಪಕ್ಷದ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರೂ ಸಹ, ಸದಾ ಬಡವರ ಹೋರಾಟದಲ್ಲಿ ಭಾಗವಹಿಸುತ್ತಿದ್ದರು ಎಂದು ತಮ್ಮ ಸಂತಾಪದಲ್ಲಿ ನೆನಪಿಸಿಕೊಂಡಿದ್ದಾರೆ.

# ಹೆಚ್ಕೆಆರ್ ಅಗಲಿಕೆ ಸಮಾಜಕ್ಕೆ ಅಪಾರ ನಷ್ಟ : ಸಂಸದ ಸಿದ್ದೇಶ್ವರ ಕಂಬನಿ

ದಾವಣಗೆರೆ, ಮೇ 9- ಹಿರಿಯ ಕಾರ್ಮಿಕ ಮುಖಂಡ ಎಚ್.ಕೆ. ರಾಮಚಂದ್ರಪ್ಪ ಅಗಲಿಕೆ ಜಿಲ್ಲೆಗೆ ಮತ್ತು ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕರು, ಕಾರ್ಮಿಕರ ಧ್ವನಿಯಾಗಿ ಅವರ ಪರವಾಗಿ ಹಲವು ಹೋರಾಟಗಳನ್ನು ಮಾಡಿ, ವಾಲ್ಮೀಕಿ ಸಮಾಜದ ಏಳಿಗೆಗಾಗಿ ದುಡಿದರು. ಅವರ ಅಗಲಿಕೆ ಅಪಾರ ನೋವನ್ನುಂಟು ಮಾಡಿದೆ. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಕುಟುಂಬಕ್ಕೆ, ಹಿತೈಷಿಗಳಿಗೆ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದಾರೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆ ನಾಯಕ ವಿದ್ಯಾರ್ಥಿ ನಿಲಯದ ಗೌರವ ಅಧ್ಯಕ್ಷರು ಮತ್ತು ನಗರಸಭೆ ಮಾಜಿ ಅಧ್ಯಕ್ಷರು, ನಮ್ಮ ಸಮಾಜದ ಮುಖಂಡರು, ಕಮ್ಯುನಿಸ್ಟ್ ಪಕ್ಷದ ನೇತಾರರು, ಕಾರ್ಮಿಕ ವರ್ಗದ ಜನರ ಧ್ವನಿಯಾಗಿದ್ದ

**ಕಾಂ|| ಹೆಚ್.ಕೆ. ರಾಮಚಂದ್ರಪ್ಪ**

ಅವರು ನಿಧನರಾಗಿದ್ದು ನಮಗೆಲ್ಲಾ ತುಂಬಾ ದುಃಖ ತಂದಿದೆ. ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

♦ **ಹೆಚ್.ಎಸ್. ನಾಗರಾಜ್,** ನಿವೃತ್ತ ಕಛೇರಿ ಅಧೀಕ್ಷಕರು ಬಿ.ಎಸ್.ಎನ್.ಎಲ್, ದಾವಣಗೆರೆ.
♦ **ಕೊಟ್ರೇಶ್ ಡಿ.,** ಪತ್ರಾಂಕಿತ ವ್ಯವಸ್ಥಾಪಕರು, ಶಿಕ್ಷಣ ಇಲಾಖೆ, ದಾವಣಗೆರೆ.

# ದಾವಣಗೆರೆಯಲ್ಲಿ ವ್ಯಾಕ್ಸಿನ್ ಹಾಹಾಕಾರ...!

**ಓದುಗರ ಪತ್ರ**

ಮಾನ್ಯರೇ,

ಕಳೆದ ವರ್ಷದ ಕೊರೊನಾ ಮಹಾಮಾರಿ ಬೆಂಬಿಡದ ಭೂತವಾಗಿ ಫೆಬ್ರವರಿಯಲ್ಲಿ ಆರಂಭವಾದಾಗ ಲಸಿಕೆಯನ್ನು ಪಡೆಯಲು ಹಿಂದು..ಮುಂದು ಮಾಡಿದವರು ಈಗ ಲಸಿಕೆಯನ್ನು ಪಡೆಯಲು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಉದ್ವಿಗ್ನತೆ ಸಾಮಾನ್ಯ ಜನರಲ್ಲಿ ಹೆಚ್ಚಾಗಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಸರತಿಯಲ್ಲಿ ನಿಲ್ಲುವ ಬದಲು ರೂ. 250/- ನೀಡಿ ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆಯನ್ನು ಹಾಕಿಸಿಕೊಂಡವರು... ಈಗ 2ನೇ ಡೋಸ್ ಲಸಿಕೆ (ಖಾಸಗಿಯಲ್ಲೂ ಅಭಾವ) ಅವರೂ ಸಹ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಲಸಿಕೆ ಪಡೆಯಲು ಸರತಿಯಲ್ಲಿ ನಿಲ್ಲುವಂತಾಗಿದೆ.

ಕೊರೊನಾ ಮಹಾಮಾರಿಗೆಂದು ಕಂಡುಬರುವ ನಮ್ಮ ಕೋವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆಯ ಮೊದಲ ಡೋಸನ್ನು ಪಡೆದು 45/50 ದಿನಗಳಾದರೂ ಎರಡನೇ ಡೋಸಿಗೆ ಪರದಾಡುವಂತಾಗಿದೆ.

ಲಸಿಕೆ ಪಡೆಯಯುವವರು ನಿಗದಿತ ಸಮಯದಲ್ಲಿ 2ನೇ ಡೋಸ್ ಪಡೆಯಬೇಕು... ಅಂದರೆ ಎರಡನೆಯ ಡೋಸ್ ಲಸಿಕೆಯನ್ನು ನೀಡುವ ವೇಳಾಪಟ್ಟಿ ಕೋವ್ಯಾಕ್ಸಿನ್ 28 ರಿಂದ 42 ದಿನಗಳ ಅಂತರ..., ಕೋವಿಶೀಲ್ಡ್ 42 ರಿಂದ 56 ದಿನಗಳ ಅಂತರದಲ್ಲಿ ಪಡೆಯಬೇಕೆಂದು ತಿಳಿದಿದ್ದವರಿಗೆ.... ಈಗ ಆಸ್ಪತ್ರೆ ಯಿಂದ ಆಸ್ಪತ್ರೆಗೆ ಅಲೆದಾಡುವ ಉದ್ವಿಗ್ನತೆ ಹೆಚ್ಚಾಗಿದೆ.

ಕೋವಿಶೀಲ್ಡ್ ಲಸಿಕೆ ಸರಬರಾಜಾಗುತ್ತಿದ್ದರೂ ಅವಶ್ಯಕತೆ ಇದ್ದವರಿಗೆ ಇನ್ನೂ ಸಿಗುತ್ತಿಲ್ಲ... ಹಾಗೆಯೇ ಕೋವ್ಯಾಕ್ಸಿನ್ ಲಸಿಕೆ ಕಡಿಮೆ ಪ್ರಮಾಣದಲ್ಲಿ ಬರುತ್ತಿರುವುದರಿಂದ.... ಈ ಹಿಂದೆಯೇ ಮೊದಲ ಲಸಿಕೆ ಪಡೆದವರೆಲ್ಲರೂ ಸರ್ಕಾರಿ ಆಸ್ಪತ್ರೆಗಳಿಗೆ, ಕೇಂದ್ರಗಳಿಗೆ ದೌಡಾಯಿಸುತ್ತಿದ್ದಾರೆ.

ನಿನ್ನೆ ವಾಹಿನಿ (ಟಿವಿ 9 ಕನ್ನಡ) ಒಂದರಲ್ಲಿ ಜನಸಾಮಾನ್ಯರನ್ನು ಉದ್ವಿಗ್ನತೆಯಿಂದ ಹೊರತರಲು...

ಡಾ.ಪವನ್ ಕುಮಾರ್, ಪ್ರೊಫೆಸರ್ ಇನ್ ಮೆಡಿಸಿನ್, ಡಾ.ಚಂದ್ರಶೇಖರ್, ರೋಗ ನಿರೋಧಕ ತಜ್ಞ ಹಾಗೂ ಡಾ.ವಿಶಾಲ್‌ರಾವ್, ಹೆಡ್ ಅಂಡ್ ನೆಕ್ ಅಂಕಾಲಜಿಸ್ಟ್ ಅವರು ತಿಳಿಸಿರುವಂತೆ ಈ ಹಿಂದೆ ಮೊದಲನೇ ಡೋಸ್ ಪಡೆದು 2ನೇ ಡೋಸ್ ಪಡೆಯಲು 4 ವಾರದ ಸಮಯ ನಿಗದಿ ಮಾಡಲಾಗಿದ್ದು ಈಗ 2ನೇ ಡೋಸ್ ಪಡೆಯಲು 8 ರಿಂದ 12 ವಾರದ ಸಮಯ ನಿಗದಿಯಾಗಿರುವುದರಿಂದ ವ್ಯಾಕ್ಸಿನೇಷನ್ ಟೆನ್ಷನ್‌ನಿಂದ ಹೊರಬಂದು ಧೈರ್ಯದಿಂದ ಇದ್ದು, ಸರಿಯಾಗಿ ಮಾಸ್ಕ್ ಹಾಕುವುದು. ಸಾಮಾಜಿಕ ಅಂತರವನ್ನು ಕಾಪಾಡುವ ಹಾಗೂ ಸ್ವಚ್ಛತೆಗೆ ಆದ್ಯತೆ, ಅವಶ್ಯಕತೆ ಬಗ್ಗೆ ತಿಳುವಳಿಕೆ ನೀಡಿದ್ದರಿಂದ.. ನಾನು ಕೋವ್ಯಾಕ್ಸಿನ್ ಪಡೆದು ಇಂದಿಗೆ 43 ದಿನಗಳಾಗಿದ್ದರಿಂದ ಆತಂಕದಲ್ಲಿದ್ದೆ. ಮೇಲಿನ ವೈದ್ಯರು ಹೇಳಿಕೆಯಿಂದ ಈಗ ಸ್ವಲ್ಪ ನಿರಾಳ.

ನಾಳೆ ಸೋಮವಾರ ಲಾಕ್‌ಡೌನ್ ಇರುವುದರಿಂದ 2ನೇ ಲಸಿಕೆ ಪಡೆಯಲು ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ನಮ್ಮ ದ್ವಿಚಕ್ರ ವಾಹನದಲ್ಲಿ ಹೋಗಲು ಜಿಲ್ಲಾಧಿಕಾರಿ ಅನುಮತಿಯನ್ನು ನೀಡಲಿ ಎಂದು ಪ್ರಾರ್ಥಿಸುವೆ.

- **ರಘುನಾಥರಾವ್ ತಾಪ್ಸೆ,**
ನಿವೃತ್ತ ಬ್ಯಾಂಕ್ ಅಧಿಕಾರಿ, ದಾವಣಗೆರೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte